ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 1, ನವೆಂಬರ್ 2024
SHRIDEVI ANTARANGA
Monthly Magazine




SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್



**ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಮರೆಯಬಾರದ ಮಹಾಚೇತನ

# ಆಲೂರು ವೆಂಕಟರಾಯರು



**ಶಾಲಾ ದಿನದ ನೆನಪು**

ಹಿಂದೆ ನವಲಗುಂದ ತಾಲೂಕಾಗಿದ್ದ, ಈಗ ಅಣ್ಣಿಗೇರಿ ತಾಲೂಕಿನಲ್ಲಿರುವ ನನ್ನೂರು ತುಪ್ಪದಕುರಹಟ್ಟಿಯಲ್ಲಿ ನನ್ನ ಪ್ರಾಥಮಿಕ ಶಿಕ್ಷಣ ಮುಗಿಯುತ್ತದೆ. ಮುಲ್ಕಿ ಪರೀಕ್ಷೆಯಲ್ಲಿ ಇಡೀ ಧಾರವಾಡ ಜಿಲ್ಲೆಗೆ ಮೆರಿಟ್ ಪಡೆದ 32 ಜನರಲ್ಲಿ ಒಬ್ಬನಾಗಿದ್ದ ನನಗೆ ಸರ್ಕಾರ ವಿದ್ಯಾರ್ಥಿವೇತನವನ್ನು ಕೊಡುತ್ತದೆ. ಅದರಿಂದ ಪ್ರೌಢಶಾಲಾ ಶಿಕ್ಷಣ ರೋಣ ತಾಲೂಕಿನ ಹೊಳೆಆಲೂರಿನ ಶ್ರೀ ಕಲ್ಮೇಶ್ವರ ವಿವಿಧೋದ್ದೇಶ ಪ್ರೌಢಶಾಲೆಯಲ್ಲಿ (ಎಸ್.ಕೆ.ಎಂ.ಪಿ) ನಡೆಯುತ್ತದೆ. ಈಗ ಈ ಊರು ರೋಣ ತಾಲೂಕು ಗದಗ ಜಿಲ್ಲೆಯಲ್ಲಿದೆ. ಹೊಳೆಆಲೂರು ಮಲಪ್ರಭಾ ದಂಡೆಯ ಮೇಲಿದೆ. ಇಲ್ಲಿನ ಶಿವ ಮತ್ತು ಪಾರ್ವತಿಯ ದೇವಾಲಯ ತುಂಬಾ ಪ್ರಸಿದ್ಧವಾದದ್ದು. ಇಲ್ಲಿ ಎಚ್ಚರಸ್ವಾಮಿ ಮಠವಿದೆ. ಹೊಳೆಆಲೂರನ್ನು 'ಗಾಡಿ ಆಲೂರು' ಎಂದು ಸಹ ಕರೆಯುತ್ತಾರೆ.

ಹೊಳೆಆಲೂರಿನಿಂದ ಇಬ್ಬರು ಸಾಹಿತ್ಯಪುರುಷರು ಕನ್ನಡನಾಡಿಗೆ ದೊರಕಿದ್ದಾರೆ. ಅವರುಗಳೆಂದರೆ ಕನ್ನಡದ ಕುಲಪುರೋಹಿತರೆಂದು ಖ್ಯಾತರಾಗಿರುವ ಆಲೂರು ವೆಂಕಟರಾಯರು ಮತ್ತು ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದಿರುವ ಡಾ. ರಂ.ಶ್ರೀ. ಮುಗುಳಿ ಅವರು.

ನಮ್ಮ ಕನ್ನಡ ಅಧ್ಯಾಪಕರಾಗಿದ್ದ ಹೆಚ್.ಎಲ್.ಎನ್. ಭಟ್ಟ ಮತ್ತು ಸಂಸ್ಕೃತ ಅಧ್ಯಾಪಕರಾಗಿದ್ದ ಕುಲಕರ್ಣಿ ಅವರುಗಳು ಈ ಇಬ್ಬರ ಬಗೆಗೆ ಅನೇಕ ವಿಚಾರಗಳನ್ನು ಹೇಳಿದ್ದರು.

▸▸ 2ನೇ ಪುಟಕ್ಕೆ...

**ಹ್ಯಾಕಥಾನ್ ಸಮಾವೇಶ**

# ತಂತ್ರಜ್ಞಾನದ ಪ್ರಯೋಜನ
## ಸಾಮಾನ್ಯರಿಗೆ ತಲುಪಿದರೆ ಮಾತ್ರ ಪ್ರಗತಿ ಸಾಧ್ಯ

**ಡಾ. ಪ್ರಣಬ್ ಮೊಹಂತಿ, ಡಿಜಿಪಿ (ಸಿ.ಐ.ಡಿ.)**




ತಂತ್ರಜ್ಞಾನದ ಪ್ರಯೋಜನ ಸಾಮಾನ್ಯ ಜನರಿಗೆ ತಲುಪಿದಾಗ ಮಾತ್ರ ನಿರೀಕ್ಷಿತ ಪ್ರಗತಿ ಸಾಧ್ಯ ಎಂದು ಸಿಐಡಿ ವಿಭಾಗದ ಪೊಲೀಸ್ ಮಹಾನಿರ್ದೇಶಕ ಡಾ. ಪ್ರಣಬ್ ಮೊಹಂತಿ ಅಭಿಪ್ರಾಯಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಗೆ ಹೊಸ ರೂಪವನ್ನು ಕೊಟ್ಟು ಹ್ಯಾಕಥಾನ್ ಎಂಬ ವಿನೂತನ ಕಾರ್ಯಕ್ರಮವನ್ನು ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು ಏರ್ಪಡಿಸಿ ಉತ್ತಮ ಪರಂಪರೆಗೆ ನಾಂದಿ ಹಾಡಿದೆ. ಹೊಸ ಶಿಕ್ಷಣನೀತಿಯು ವಿದ್ಯಾರ್ಥಿಗಳಲ್ಲಿ ಕಲಿಕೆ ಮತ್ತು ಸಂಶೋಧನೆಗೆ ಒತ್ತು ಕೊಡುತ್ತಿದೆ. ತಂತ್ರಜ್ಞಾನದ ಲಾಭವನ್ನು ಜನಸಾಮಾನ್ಯರಿಗೆ ಮುಟ್ಟಿಸುವಲ್ಲಿ ಇಂಜಿನಿಯರ್‌ಗಳ ಪಾತ್ರ ದೊಡ್ಡದಾಗಿದೆ. ಅದರಲ್ಲಿಯೂ ವಿಶೇಷವಾಗಿ ವೈದ್ಯಕೀಯ ವಿಜ್ಞಾನ, ಪರಿಸರ ಸಂರಕ್ಷಣೆ ಮತ್ತು ಕೃಷಿಯಲ್ಲಿ ಸಂಶೋಧನೆಗಳಿಗೆ ಹೇರಳ ಅವಕಾಶಗಳಿವೆ. ಆಳವಾದ ಜ್ಞಾನ ಮತ್ತು ಪರಿಣತಿ ಕ್ರಾಂತಿಕಾರಿ ಬದಲಾವಣೆಗಳಿಗೆ ದಾರಿಯಾಗಲಿವೆ. ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಇಂತಹ ಕುಕರ್ಮಿಗಳಿಂದ ಅಮಾಯಕರು ಮೋಸ–ವಂಚನೆಗೆ ಬಲಿಯಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. ಇಂತಹ ಅಪರಾಧಗಳನ್ನು ತಡೆಗಟ್ಟುವಲ್ಲಿ ತಂತ್ರಜ್ಞಾನವು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ನಿಟ್ಟಿನಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಬುದ್ಧಿಶಕ್ತಿಯನ್ನು ಜನರ ಬದುಕನ್ನು ಸುಧಾರಿಸುವ ಉದ್ದೇಶಕ್ಕಾಗಿ ವಿನಿಯೋಗ ಮಾಡಬೇಕು. ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ (AI – Artificial Intelligence) ಕ್ಷೇತ್ರವು ಬಲಗೊಂಡು ಜನಜೀವನದ ಮೇಲೆ ದೀರ್ಘಾವಧಿಯ ಪರಿಣಾಮವನ್ನು ಬೀರಲಿದೆ. ಕೃತಕ ಬುದ್ಧಿಮತ್ತೆಯು ಸಮಾಜ ಮತ್ತು ಜನಜೀವನದ ಮುಖ್ಯ ಆದ್ಯತೆಗಳನ್ನು ಪುನಾರೂಪಿಸಲಿದೆ. ಜನರ ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಿದಷ್ಟು ಹೊಸ ಹೊಸ ದಾರಿಗಳು ಗೋಚರಿಸುತ್ತವೆ. ಇಂತಹ ಸನ್ನಿವೇಶದಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ಸಮಾಜಕ್ಕೆ ಕೊಡುಗೆ ನೀಡುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂಬ ಕಿವಿಮಾತನ್ನು ಹೇಳಿದರು.

ಸಂವಹನ ಕ್ಷೇತ್ರದಲ್ಲಿ ಇಂದು ಕ್ರಾಂತಿಕಾರಿ ಬದಲಾವಣೆಗಳಾಗಿವೆ ಮತ್ತು ಆಗುತ್ತಿವೆ. ಕೆಲವು ವರ್ಷಗಳ ಹಿಂದೆ ಒಂದು ಊರಿನಿಂದ ಮತ್ತೊಂದು ಊರಿಗೆ ದೂರವಾಣಿ ಕರೆಮಾಡಲು ಬಹಳಷ್ಟು ಪ್ರಯಾಸಪಡಬೇಕಿತ್ತು. ಆದರೆ ಇಂದು ವಿಶ್ವದ ಯಾವುದೇ ಪ್ರದೇಶದ ಜನರೊಂದಿಗೆ ಸಂಭಾಷಣೆಯನ್ನು ಸುಲಭವಾಗಿ ಮತ್ತು ಶೀಘ್ರವಾಗಿ ಮಾಡಬಹುದಾಗಿದೆ ಹಾಗೂ ದೂರದಲ್ಲಿ ನಡೆಯುವ ದೃಶ್ಯಗಳನ್ನು ವೀಡಿಯೋ ಮೂಲಕ ವೀಕ್ಷಿಸುವ ಸೌಲಭ್ಯವು ನಮಗೆ ಲಭ್ಯವಾಗಿದೆ. ತಂತ್ರಜ್ಞಾನ ಬೆಳೆದ ಹಾಗೆ ಅದರ ಪ್ರಯೋಜನಗಳು ಜನಸಾಮಾನ್ಯರಿಗೆ ದೊರೆಯುತ್ತಿವೆ. ದೇಶದಲ್ಲಿ ಪ್ರತಿಭಾವಂತರಿಗೆ ಕೊರತೆ ಇಲ್ಲ. ಅಂತಹವರನ್ನು ಗುರುತಿಸುವಲ್ಲಿ, ಅವರಿಗೆ ವೇದಿಕೆಯನ್ನು ಕಲ್ಪಿಸಿಕೊಡುವಲ್ಲಿ ಶಿಕ್ಷಣಸಂಸ್ಥೆಗಳ ಪಾತ್ರ ಬಹಳ ಮಹತ್ತ್ವದ್ದು. ಪ್ರತಿಭಾನ್ವೇಷಣೆಯ ಇಂತಹ ಕಾರ್ಯಕ್ರಮಗಳನ್ನು ದೇಶಾದ್ಯಂತ ಹಮ್ಮಿಕೊಳ್ಳುವ ಅಗತ್ಯವಿದೆ ಎಂದೂ ಡಾ. ಮೊಹಂತಿ ಒತ್ತಿ ಹೇಳಿದರು.




ಶ್ರೀದೇವಿ ವಿದ್ಯಾಸಂಸ್ಥೆಯಿಂದ ಡಾ. ಪ್ರಣಬ್ ಮೊಹಂತಿ ಅವರಿಗೆ ಸನ್ಮಾನ.

# ಸಿಂಗಲ್ ಮದರ್



ಜಾರ್ಖಂಡ್ ಮೂಲದ ಬಿನ್ನಿಕುಮಾರಿ

ಮಹಿಳೆಯರು ತಮ್ಮ ದೈನಂದಿನ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಿಕೊಳ್ಳಬೇಕು, ಹೇಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬೇಕು ಎಂಬುದಕ್ಕೆ ಒಂದೇ ಎಡೆಯಲ್ಲಿ ಪರಿಹಾರವನ್ನು ಬಿನ್ನಿಕುಮಾರಿಯವರು ಒದಗಿಸಿದ್ದಾರೆ. ವಿಶೇಷವಾಗಿ 'ಸಿಂಗಲ್ ಮದರ್' ಅಗಿರುವರು ತಮ್ಮ ಪುಟ್ಟ ಮಗುವನ್ನು ಯಾವ ರೀತಿ ನೋಡಿಕೊಳ್ಳಬೇಕು, ಹೇಗೆ ಪೋಷಣೆ ಮಾಡಬೇಕು, ಇವರ ನೆರವಿಗೆ ಬರುವ ಸ್ವಯಂ ಸೇವಾಸಂಸ್ಥೆಗಳು, ಸೇವಾವ್ಯಕ್ತಿಗಳನ್ನು ಎಲ್ಲಿ ಮತ್ತು ಹೇಗೆ ಸಂಪರ್ಕಮಾಡಬೇಕು. ಉದ್ಯೋಗಸ್ಥ ಮಹಿಳೆಯರು ಅನುಭವಿಸುವ ಸಮಸ್ಯೆಗಳೇನು, ಅವರು ತಮ್ಮ ಸಮಸ್ಯೆಗಳನ್ನು ಯಾವ ರೀತಿ ಪರಿಹರಿಸಿಕೊಳ್ಳಬೇಕು, ಯಾರು ಅವರ ಸಹಾಯಕ್ಕೆ ಬರುತ್ತಾರೆ, ಎಂಬೆಲ್ಲ ಪ್ರಶ್ನೆಗಳಿಗೆ ಸಮಾಧಾನ ಉತ್ತರ ದೊರಕಿಸುವ ಪ್ರಯತ್ನ ಮಾಡಿದ್ದಾರೆ.

▸▸ 3ನೇ ಪುಟಕ್ಕೆ...

## ಮರೆಯಬಾರದ ಮಹಾಚೇತನ

# ಆಲೂರು ವೆಂಕಟರಾಯರು

▶▶ ಮೊದಲನೇ ಪುಟದಿಂದ

ನಾನು ಅಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಆಲೂರು ಅವರು ನಿಧನರಾದರು. ನಮ್ಮ ಸಾಮೂಹಿಕ ಪ್ರಾರ್ಥನೆಯ ಅನಂತರ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಆಗ ಅವರ ವಿಚಾರ ಅಷ್ಟೊಂದು ತಿಳಿದಿರಲಿಲ್ಲ. ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡನಾಡಿನ ಏಕೀಕರಣಕ್ಕೆ ಶ್ರಮಿಸಿದ ಆಲೂರು ವೆಂಕಟರಾಯರನ್ನು ನೆನಪು ಮಾಡಿಕೊಳ್ಳುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

### ಕನ್ನಡಿಗರ ಜಾಗೃತಿಗೆ ಮೀಸಲಾದ ಬದುಕು

"ಕನ್ನಡಿಗರೇ, ತಮ್ಮ ಸುತ್ತಮುತ್ತ ದೃಷ್ಟಿ ಚೆಲ್ಲಿದರೆ ಅಲ್ಲಲ್ಲಿ ನಮ್ಮ ಪ್ರಾಚೀನ ಕರ್ನಾಟಕದ ಸಂಪನ್ನತೆಯ ಹೆಗ್ಗುರುತುಗಳು ಕಣ್ಣಿಗೆ ಧಾರಾಳವಾಗಿ ಗೋಚರವಾಗುತ್ತವೆ" ಎಂದವರು ಕನ್ನಡ ಕುಲಪುರೋಹಿತರೆಂದು ಖ್ಯಾತರಾಗಿರುವ ಆಲೂರು ವೆಂಕಟರಾಯರು. ಕರ್ನಾಟಕವನ್ನು ಧ್ಯೇಯವಾಗಿಟ್ಟುಕೊಂಡು ಅದರ ಏಕೀಕರಣ ಹಾಗೂ ಅಭ್ಯುದಯದಲ್ಲಿ ಅಖಂಡ ಭಾರತ ಮತ್ತು ವಿಶ್ವದ ಮಹೋನ್ನತೆಯನ್ನು ಕಂಡವರು ಆಲೂರು ವೆಂಕಟರಾಯರು. ಕನ್ನಡಿಗರಲ್ಲಿ ಅಭಿಮಾನ ಮತ್ತು ಜಾಗೃತಿ ಬೆಳೆಸುವ ದಿಸೆಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡ ಆರುನೂರು ವರ್ಷಗಳ ಸವಿನೆನಪಿಗೆ ಒಂದು ಲಕ್ಷ ಜನರನ್ನು ಒಂದುಗೂಡಿಸಿ ಅವರಿಗೆ ಕರ್ನಾಟಕದ ಕಲೆ, ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಮತ್ತು ವೈಭವಗಳನ್ನು ಪರಿಚಯಿಸಲು ಹಂಪಿಯಲ್ಲಿ 'ವಿಜಯನಗರ ಷಟ್‌ಶತಮಾನೋತ್ಸವ'ವನ್ನು ಅರ್ಥಪೂರ್ಣವಾಗಿ ಆಚರಿಸಿದವರು.

### ವಿನಯಶೀಲತೆ

ಶ್ರೀಯುತರು ತಮ್ಮ ಜೀವನದ ಕಾಲದಲ್ಲಿಯೇ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ವಿಶೇಷವಾದ ಕೊಡುಗೆ ನೀಡಿ ಜನಪ್ರಿಯರಾಗಿದ್ದರು. ಆದರೂ ಆಲೂರು ವೆಂಕಟರಾಯರಲ್ಲಿ ವಿನಯವೇ ಪ್ರಧಾನವಾದ ಗುಣವಾಗಿತ್ತು. ಇದಕ್ಕೆ ಅವರ ಈ ಮಾತುಗಳೇ ಸಾಕ್ಷಿ. "ನಾನು ಲೋಕಮಾನ್ಯ ತಿಲಕ್ ಮತ್ತು ಮಹಾತ್ಮ ಗಾಂಧೀಜಿಯಂತೆ ಲೋಕೋತ್ತರ ವ್ಯಕ್ತಿತ್ವವನ್ನು ಪಡೆದವನಲ್ಲ. ಸಾಮಾನ್ಯ ಬುದ್ಧಿಯ ಒಬ್ಬ ಪಾಮರ". ಈ ಎರಡು ಚೇತನಗಳ ಜೊತೆ ಆಲೂರು ಅವರು ಕೆಲಸ ಮಾಡಿದ್ದಾರೆ. ಅವರ ಆದರ್ಶಗಳನ್ನು ಎತ್ತಿ ಹಿಡಿದಿದ್ದಾರೆ.

### ಕನ್ನಡ ಕುಲಪುರೋಹಿತರು

ಭೂಮಿಗೆ ಬಿದ್ದ ಬೀಜ ನೆಲದ ಸತ್ವವನ್ನು ಪಡೆದು ವಿಶಾಲವಾದ ವೃಕ್ಷವಾಗುವಂತೆ ಆಲೂರು ವೆಂಕಟರಾಯರು ಸಾಮಾನ್ಯರ ನಡುವೆ ಜನಿಸಿ ಉನ್ನತ ಆದರ್ಶಗಳನ್ನು ತಮ್ಮ ಅಂತರಾತ್ಮದಲ್ಲಿರಿಸಿಕೊಂಡು ತಾವು ಹುಟ್ಟಿದ ನೆಲದ ಜನರನ್ನು ಜಾಗೃತಗೊಳಿಸಿದರು.

ಆಲೂರು ವೆಂಕಟರಾಯರು ಕನ್ನಡ ಸಾಹಿತ್ಯ, ಇತಿಹಾಸ, ಸಂಸ್ಕೃತಿ, ವಾಚನಾಭಿರುಚಿಯ ಹೆಚ್ಚಳ, ಉದ್ಯಮಶೀಲತೆ ಮತ್ತು ಏಕೀಕರಣ – ಇವುಗಳಿಗೆ ಕೊಟ್ಟ ಕಾಣಿಕೆಯನ್ನು ಗಮನಿಸಿ ಕನ್ನಡದ ಜನತೆ ಅವರನ್ನು 'ಕನ್ನಡದ ಕುಲಪುರೋಹಿತ' ಎಂದು ಅಭಿಮಾನದಿಂದ ಕರೆದಿದ್ದಾರೆ. ಅವರಿಗೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ ನೀಡಿ ಗೌರವಿಸಿದ್ದಾರೆ. ಆಲೂರು ವೆಂಕಟರಾಯರ ಬದುಕು ಸಮಕಾಲೀನ ಜನತೆಗೆ ಸ್ಫೂರ್ತಿದಾಯಕವಾಗಿದೆ. ಅವರ ಚಿಂತನೆಗಳು ಕರ್ನಾಟಕಕ್ಕೆ ದಾರಿ ದೀಪವಾಗಿದೆ.

1941ರಲ್ಲಿ ಆಲೂರು ವೆಂಕಟರಾಯರು ತಮ್ಮ ಅರವತ್ತನೆಯ ವಯಸ್ಸಿನಲ್ಲಿ 'ನನ್ನ ಜೀವನ ಸ್ಮೃತಿಗಳು' ಎನ್ನುವ ಆತ್ಮಕಥನವನ್ನು ಪ್ರಕಟಿಸುತ್ತಾರೆ. ಈ ಗ್ರಂಥ ಅವರ ಜೀವನ ವೃತ್ತಾಂತವನ್ನು ತಿಳಿಸುವುದರ ಜೊತೆಗೆ ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಜೀವನದ ಮೇಲೆ ಬೆಳಕನ್ನೂ ಚೆಲ್ಲುತ್ತದೆ. ಏಕೀಕರಣಕ್ಕೆ ಸಂಬಂಧಪಟ್ಟ ಅನೇಕ ವಿವರಗಳು ಈ ಗ್ರಂಥದಲ್ಲಿ ಕಾಣಬರುತ್ತದೆ.

### ಬದುಕು

ಆಲೂರು ವೆಂಕಟರಾಯರು 1880ರ ಜುಲೈ 12ರಂದು ಜನಿಸಿದರು. ತಂದೆ ಭೀಮರಾಯರು. ತಾಯಿ ಭಾಗೀರಥಿ ಭೀಮರಾಯರು. ಅವರ ತಂದೆ ಕಂದಾಯ ಇಲಾಖೆಯಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡುತ್ತಿದ್ದರು. ತಂದೆಯಿಂದ ಸ್ವಾಭಿಮಾನ, ವ್ಯಾಸಂಗಪ್ರಿಯತೆ, ಸ್ವದೇಶಪ್ರೇಮಗಳನ್ನು ಮತ್ತು ತಾಯಿಯಿಂದ ಸಂಸ್ಕೃತಿ ಮತ್ತು ಸಭ್ಯತೆಗಳನ್ನು ಅವರು ಬಳುವಳಿಯಾಗಿ ಪಡೆದರು.

ಆಲೂರು ವೆಂಕಟರಾಯರು 1897ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸ್ ಮಾಡಿದರು. ತಂದೆಯ ದೂರದೃಷ್ಟಿಯ ಫಲವಾಗಿ ಮನೆಯಲ್ಲಿಯೇ ಸಂಸ್ಕೃತ ಕಾವ್ಯಗಳನ್ನು ಅಭ್ಯಾಸ ಮಾಡಿದರು. ಅಂದಿನ ಮರಾಠಿ ಪ್ರಭಾವಕ್ಕೊಳಗಾಗಿ ಮರಾಠಿ ಭಾಷೆಯಲ್ಲಿ ಪ್ರಭುತ್ವ ಸಾಧಿಸಿದ್ದರು. ಆದರೂ ಅವರ ಹೃದಯದಲ್ಲಿ ಕನ್ನಡದ ಪ್ರೇಮ ಸದಾ ಉಜ್ವಲವಾಗಿ ಬೆಳಗುತ್ತಿತ್ತು.

ಮ್ಯಾಕ್ಸ್‌ಮುಲರ್‌ನ 'ಧರ್ಮಮೀಮಾಂಸೆ' ಕೃತಿಯನ್ನು ಓದಿದ ಆಲೂರು ವೆಂಕಟರಾಯರು ತಮಗೆ ಮೂಡಿದ ಸಂದೇಹಗಳ ಬಗ್ಗೆ ಅವರಿಗೆ ಪತ್ರ ಬರೆದರು. ಅಷ್ಟರಲಿಯ್ಯೇ ಮ್ಯಾಕ್ಸ್ ಮುಲ್ಲರ್ ನಿಧನರಾದ ಕಾರಣ ಇವರ ಪತ್ರಕ್ಕೆ ಉತ್ತರ ಬರಲಿಲ್ಲ.

1896ರಲ್ಲಿ ಬಾಗಲಕೋಟೆ ಶಾಮರಾವ್ ಮಂಗಳೇಡಕರ್ ಅವರ ಮಗಳು ಲಕ್ಷ್ಮಿಬಾಯಿಯ ಜೊತೆ ವಿವಾಹವಾಗುತ್ತದೆ. ಆಲೂರು



ದಂಪತಿಗಳಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಒಂದು ಹೆಣ್ಣು ಮಗುವಾಗುತ್ತವೆ.

### ಉನ್ನತ ಶಿಕ್ಷಣ

ಉನ್ನತ ಶಿಕ್ಷಣಕ್ಕೆ ಅವರು ಪುಣೆಗೆ ಹೋಗುತ್ತಾರೆ. ಅಂದಿನ ರಾಷ್ಟ್ರೀಯ ಭಾವನೆಗಳಿಗೆ ವಿರೋಧಿಯಾಗಿದ್ದ ಡೆಕ್ಕನ್ ಕಾಲೇಜಿಗೆ ಆಲೂರು ಅವರು ಸೇರದೆ ಫರ್ಗ್ಯುಸನ್ ಕಾಲೇಜಿಗೆ ಸೇರುತ್ತಾರೆ. ಪುಣೆಯಲ್ಲಿದ್ದಾಗ ಆಲೂರು ಅವರ ಮೇಲೆ ತಿಲಕರ ಪ್ರಭಾವ ಯಥೇಚ್ಛವಾಗಿ ಬೀಳುತ್ತದೆ. ತಿಲಕರ ಮಹಾನ್ ಕೃತಿ 'ಗೀತಾ ರಹಸ್ಯ'ವನ್ನು ಕನ್ನಡಕ್ಕೆ ಅವರು ಅನುವಾದ ಮಾಡುತ್ತಾರೆ. 'ಗೀತಾಸಂದೇಶ' 'ಗೀತಾಭಾವ' ಮತ್ತು 'ಮಧ್ವ ಸಿದ್ಧಾಂತ ಪ್ರವೇಶಿಕೆ' ಅವರ ಪ್ರಮುಖ ಅಧ್ಯಾತ್ಮ ಕೃತಿಗಳಾಗಿವೆ.

1904–5ರಲ್ಲಿ ಅವರು ಕಾನೂನು ಪದವಿಯನ್ನು ಪಡೆಯುತ್ತಾರೆ. ಫರ್ಗ್ಯುಸನ್ ಕಾಲೇಜಿನಲ್ಲಿ ಒಂದೇ ಒಂದು ಕನ್ನಡ ಪುಸ್ತಕವೂ ದೊರೆಯದ ಕಾರಣ ಆಲೂರು ಅವರು ಮಿತ್ರರ ನೆರವಿನೊಡನೆ ಅಲ್ಲಿ ಒಂದು ಗ್ರಂಥಾಲಯದ ವ್ಯವಸ್ಥೆಯನ್ನೇ ಮಾಡುತ್ತಾರೆ.

### ಸಾಹಿತ್ಯಕ್ಷೇತ್ರಕ್ಕೆ ಪ್ರವೇಶ

ಆಲೂರು ವೆಂಕಟರಾಯರ ವ್ಯಾಸಂಗಾಭಿರುಚಿ ಅವರನ್ನು ಕನ್ನಡದ ಬರಹಗಾರರನ್ನಾಗಿ ರೂಪಿಸುತ್ತದೆ. 1905ರಲ್ಲಿ ಅವರು ಕನ್ನಡ ಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ. ಕರ್ನಾಟಕ ದೇವಿಗೆ ಸಂಪೂರ್ಣವಾಗಿ ಶರಣಾಗುತ್ತಾರೆ. ಆಲೂರು ವೆಂಕಟರಾಯರಲ್ಲಿ ಬಾಹ್ಯ ಮತ್ತು ಆಂತರಿಕ ಸಂಸ್ಕಾರಗಳ ಫಲವಾಗಿ ಕರ್ನಾಟಕ ಸೇವೆ ಮಾಡುವ ದೃಢಸಂಕಲ್ಪಮೂಡುತ್ತದೆ. ಅವರು ಮನಸ್ಸು ಮಾಡಿದ್ದಿದ್ದರೆ ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ಪಡೆಯಬಹುದಾಗಿತ್ತು. ಅವುಗಳನ್ನು ತೊರೆದು ಕರ್ನಾಟಕ ಸೇವೆಗೆ ಕಂಕಣಬದ್ಧರಾಗಿ ಅವರು ನಿಲ್ಲುತ್ತಾರೆ. 1912ರಲ್ಲಿ ರಚಿಸಿದ 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ ಶ್ರೀವಿದ್ಯಾರಣ್ಯರು' ಗ್ರಂಥ ಅವರ ಮೊದಲ ಕೃತಿ. ಹರ್ಬರ್ಟ್ ಸ್ಪೆನ್ಸರನ 'ಶಿಕ್ಷಣಮೀಮಾಂಸೆ' ಅವರ ಮೊದಲ ಅನುವಾದಿತ ಕೃತಿ.

### ಭಿನ್ನಾಭಿಪ್ರಾಯ

ಬಾಲಗಂಗಾಧರ ತಿಲಕರ ನಾಯಕತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. 1924ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಸಮ್ಮೇಳನದಲ್ಲಿ ಭಾಗವಹಿಸಿ, ಅಲ್ಲಿನ ವ್ಯವಸ್ಥಾಪಕರಾಗಿದ್ದ ಗಂಗಾಧರರಾವ್ ದೇಶಪಾಂಡೆಯರ ಅತಿಯಾದ ಮರಾಠಿ ಪ್ರೇಮಕ್ಕೆ ವಿರೋಧ ವ್ಯಕ್ತಪಡಿಸುತ್ತಾರೆ. ಖಾದಿ ಪ್ರಚಾರ ಆಂದೋಲನದಲ್ಲಿ ಸಕ್ರಿಯವಾಗಿರುತ್ತಾರೆ. ಎಂದೂ ಅವರು ತಮ್ಮ ಸ್ವಾತಂತ್ರ್ಯ ಹೋರಾಟವನ್ನು ರಾಜಕೀಯ ಬೆಳವಣಿಗೆಯ ಏಣಿಯಾಗಿ ಬಳಸಿಕೊಳ್ಳಲಿಲ್ಲ.

ಆಲೂರು ವೆಂಕಟರಾಯರು ಮಹಾತ್ಮ ಗಾಂಧೀಜಿಯವರ ವ್ಯಕ್ತಿತ್ವವನ್ನು ಮೆಚ್ಚಿಕೊಳ್ಳುತ್ತಾರೆ, ಆದರೆ ಗಾಂಧಿ ಪ್ರತಿಪಾದಿಸುತ್ತಿದ್ದ ಅಹಿಂಸಾತ್ಮಕ ಹೋರಾಟ ಮತ್ತು ರಾಜಕೀಯ ಪಕ್ಷದಲ್ಲಿ ಸಮಾಜ ಸೇವೆಯನ್ನು ಬೆರಸುವುದನ್ನು ಅವರು ಒಪ್ಪಲಿಲ್ಲ. ರಾಜಕಾರಣದಲ್ಲಿ ಸಮಾಜ ಸೇವೆಯ ವಿಚಾರಗಳನ್ನು ತೂರಿಸಬಾರದು ಎಂಬುದು ಅವರ ನಿಲವಾಗಿತ್ತು. ಅನೇಕ ಸಂದರ್ಭದಲ್ಲಿ ಸಾವರ್ಕರ್ ಸಿದ್ಧಾಂತವನ್ನು ಆಲೂರು ವೆಂಕಟರಾಯರು ಪ್ರತಿಪಾದಿಸುತ್ತಾರೆ.

### ಹತ್ತು ಹಲವು ಕೆಲಸ

ಆಲೂರು ಅವರು 1909ರಲ್ಲಿ ಕರ್ನಾಟಕ ನೂತನ ರಾಷ್ಟ್ರೀಯ ವಿದ್ಯಾಲಯವನ್ನು ಪ್ರಾರಂಭಿಸುತ್ತಾರೆ. ಪ್ರೌಢಶಾಲಾ ಶಿಕ್ಷಣದಲ್ಲಿ ವೃತ್ತಿಶಿಕ್ಷಣ ಕೊಡುವುದು ಈ ಶಾಲೆಯ ಮುಖ್ಯ ಉದ್ದೇಶವಾಗಿರುತ್ತದೆ. ಆದರೆ ಈ ಶಾಲೆ ಹೆಚ್ಚು ದಿನ ನಡೆಯುವುದಿಲ್ಲ.

ಆಲೂರು ವೆಂಕಟರಾಯರು ವಾಚನಾಲಯ ಚಳವಳಿಯಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅನೇಕ ಯುವ ಬರಹಗಾರರ ಗ್ರಂಥಗಳನ್ನು ಪ್ರಕಟಿಸಲು 'ಗ್ರಂಥಪ್ರಸಾರ ಮಂಡಲ'ವನ್ನು ಪ್ರಾರಂಭಿಸುತ್ತಾರೆ. ಕನ್ನಡದಲ್ಲಿ ಗ್ರಂಥಗಳು ಹೆಚ್ಚಾಗಿ ಪ್ರಕಟವಾಗಬೇಕು ಎನ್ನುವ ಉದ್ದೇಶದಿಂದ 1907ರಲ್ಲಿ 'ಕನ್ನಡ ಗ್ರಂಥಕರ್ತರ ಸಮ್ಮೇಳನ'ವನ್ನು ಆಯೋಜಿಸುತ್ತಾರೆ.

### ಕರ್ನಾಟಕದ ಉನ್ನತಿ

ಕ್ರಮೇಣವಾಗಿ ರಾಜಕೀಯದಿಂದ ದೂರಸರಿದ ಆಲೂರು ವೆಂಕಟರಾಯರು ಕರ್ನಾಟಕದ ಬೆಳವಣಿಗೆಗೆ ಸಂಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ. 'ಕರ್ನಾಟಕದ ಸವಾಂಗೀಣ ಉನ್ನತಿ' ಎನ್ನುವ ಮೂರು ಪದಗಳಲ್ಲಿ ನಮ್ಮ ಎಲ್ಲಾ ಆಶಯಗಳು ಒಳಗೊಂಡಿವೆ. ಕರ್ನಾಟಕತ್ವದಲ್ಲಿ ವಿಶ್ವದ ಎಲ್ಲ ಶಕ್ತಿಯು ಅಡಕವಾಗಿದೆ ಎಂದು ಅವರು ಭಾವಿಸುತ್ತಾರೆ. ಭಾರತ ಮತ್ತು ವಿಶ್ವ ಕರ್ನಾಟಕದೇವಿಯಲ್ಲಿ ಅಂತರ್ಗತವಾಗಿದೆ ಎಂದವರು ಹೇಳುತ್ತಾರೆ.

1950ರಲ್ಲಿ 'ಕರ್ನಾಟಕದ ಸೂತ್ರಗಳು' ಎನ್ನುವ ಗ್ರಂಥವನ್ನು ಹೊರತರುತ್ತಾರೆ. 1957ರಲ್ಲಿ 'ಕರ್ನಾಟಕ ವಿಕಾಸ' ಎನ್ನುವ ಗ್ರಂಥವನ್ನು ಪ್ರಕಟಿಸುತ್ತಾರೆ. ಇದರಲ್ಲಿ ಕರ್ನಾಟಕದ ಅಭಿವೃದ್ಧಿಗೆ ಬೇಕಾದ ಅನೇಕ ವಿಚಾರಗಳಿರುತ್ತವೆ. ಆಲೂರು ವೆಂಕಟರಾಯರು ತಮ್ಮ ಬರಹದಲ್ಲಿ ಕನ್ನಡಿಗರಲ್ಲಿ ಕ್ಷಾತ್ರ ತೇಜಸ್ಸನ್ನು ತುಂಬಲು ಪ್ರಯತ್ನಿಸಿದ್ದಾರೆ. ಅವರ 'ಕರ್ನಾಟಕ ವೀರರತ್ನಗಳು' ಗ್ರಂಥವೊಂದು ಹೇಗೆ ರಾಷ್ಟ್ರಾಭಿಮಾನವನ್ನು ಮೂಡಿಸಲು ಸಮರ್ಥವಾಗಿದೆ ಎನ್ನುವುದಕ್ಕೆ ಸಾಕ್ಷ್ಯವಾಗಿದೆ. ಕರ್ನಾಟಕದ ಇತಿಹಾಸದ ಸ್ಫೂರ್ತಿಯಿಂದ ಅವರು 'ಕರ್ನಾಟಕದ ಗತವೈಭವ' ಎನ್ನುವ ಗ್ರಂಥವನ್ನು ರಚಿಸುತ್ತಾರೆ. ಜಡನಿದ್ರೆಯಲ್ಲಿದ್ದ ಕನ್ನಡಿಗರನ್ನು ಬಡಿದೆಬ್ಬಿಸುವುದು ಈ ಗ್ರಂಥದ ಉದ್ದೇಶವಾಗಿತ್ತು. ಆಲೂರು ವೆಂಕಟರಾಯರು ಕರ್ನಾಟಕದ ಇತಿಹಾಸವನ್ನು ಸ್ಫೂರ್ತಿದಾಯಕವಾಗಿ ನಿರೂಪಿಸುತ್ತಾರೆ. 'ಕನ್ನಡಿಗರಲ್ಲಿ ಅಭಿಮಾನ ಮೂಡಿಸಲು ಈ ಗ್ರಂಥ ಸಮರ್ಥವಾಗಿದೆ' ಎಂದು ಡಾ. ರಂ.ಶ್ರೀ. ಮುಗಳಿ ಅವರು ಅಭಿಪ್ರಾಯಪಡುತ್ತಾರೆ. ಕರ್ನಾಟಕದ ಇತಿಹಾಸದ ಅಧ್ಯಯನಕ್ಕಾಗಿ 'ಕರ್ನಾಟಕ ಇತಿಹಾಸ ಮಂಡಲ'ವನ್ನು ಸ್ಥಾಪಿಸುತ್ತಾರೆ.

### ಕನ್ನಡಿಗರ ಜಾಗೃತಿಗೆ ಇತಿಹಾಸದ ಬಳಕೆ

ಕರ್ನಾಟಕದ ಏಕೀಕರಣಕ್ಕಾಗಿ ಅಲೂರು ವೆಂಕಟರಾಯರು ಅಪಾರವಾಗಿ ಶ್ರಮಿಸುತ್ತಾರೆ. ಅದಕ್ಕಾಗಿ ಅನೇಕ ಪತ್ರಿಕೆಗಳನ್ನು ಹೊರತರುತ್ತಾರೆ. 1920 ಹೊತ್ತಿಗೆ 'ಸಂಯುಕ್ತ ಕರ್ನಾಟಕ' ಪತ್ರಿಕೆಯನ್ನು ಹೊರತರಲು ಚಿಂತನೆ ಮಾಡುತ್ತಾರೆ. ಆಗ ಅದು ಸಾಧ್ಯವಾಗುವುದಿಲ್ಲ, ಮುಂದೆ ಆ ಪತ್ರಿಕೆ ಹೊರಬರುತ್ತದೆ. 'ಕರ್ಮವೀರ' 'ವಾಗ್ಭೂಷಣ' 'ಕನ್ನಡಿಗ' 'ಕೇಸರಿ' 'ಜಯಕರ್ನಾಟಕ' ಮೊದಲಾದ ಅನೇಕ ಪತ್ರಿಕೆಗಳನ್ನು ಅವರು ಹೊರ ತರುತ್ತಾರೆ. ಆ ಪತ್ರಿಕೆಗಳ ಸಂಪಾದಕರಾಗಿ ಸ್ಫೂರ್ತಿದಾಯಕವಾದ ಲೇಖನಗಳನ್ನು ಬರೆಯುತ್ತಾರೆ. ಆಲೂರು ವೆಂಕಟರಾಯರು ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಭಾಗದಲ್ಲಿ ವಿಶ್ವವಿದ್ಯಾಲಯ ಬರಲು ಅವರ ಹೋರಾಟ ಮುಖ್ಯ ಕಾರಣವಾಗಿರುತ್ತದೆ.

### ಪ್ರಾಣೋಪಾಸಕರು

1956 ನವೆಂಬರ್ 1ರಂದು ಕರ್ನಾಟಕ ಏಕೀಕರಣವಾದಾಗ ಹಿರಿಯರಾದ ಆಲೂರು ವೆಂಕಟರಾಯರು ಹಂಪಿಯಲ್ಲಿ ನಡೆದ ಏಕೀಕರಣ ಉತ್ಸವದಲ್ಲಿ ಭಾಗವಹಿಸಿ, ಮುಂದೆ ಕರ್ನಾಟಕವನ್ನು ಹೇಗೆ ನಿರ್ಮಾಣ ಮಾಡಬೇಕು ಎಂಬುದನ್ನು ವಿವರವಾಗಿ ತಿಳಿಸಿಕೊಡುತ್ತಾರೆ. 'ಆಲೂರು ವೆಂಕಟರಾಯರು ಕರ್ನಾಟಕದ ಪ್ರಾಣೋಪಾಸಕರು' ಎಂದು ವರಕವಿ ದ.ರಾ. ಬೇಂದ್ರೆಯವರು ಹೇಳುತ್ತಾರೆ.

### ನೆನಪು ಶಾಶ್ವತ

ಆಲೂರು ವೆಂಕಟರಾಯರು 1964 ಫೆಬ್ರವರಿ 25ರಂದು ನಿಧನರಾದರು. 1980ರಲ್ಲಿ ಅವರ ಶತಮಾನೋತ್ಸವ ಕಾರ್ಯಕ್ರಮ ನಡೆಯುತ್ತದೆ. 2006ರಲ್ಲಿ ಕರ್ನಾಟಕ ಸರ್ಕಾರ ಅವರ ಹೆಸರಿನಲ್ಲಿ ಸ್ಮಾರಕ ಭವನವನ್ನು ಧಾರವಾಡದಲ್ಲಿ ನಿರ್ಮಿಸುತ್ತದೆ. ಅಲ್ಲಿ ಈಗ ನಿರಂತರವಾಗಿ ಸಾಂಸ್ಕೃತಿಕ ಮತ್ತು ಸಾಹಿತ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಹೀಗಾಗಿ ಇಂದಿಗೂ ಆಲೂರು ವೆಂಕಟರಾಯರು ಜನಮನದಲ್ಲಿ ಶಾಶ್ವತವಾಗಿ ನೆಲಸಿದ್ದಾರೆ.

▪ ನಿರೂಪಣೆ: ಶ್ರೀವತ್ಸ

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ಸರ್ಕಾರಿ ಯೋಜನೆಗಳನ್ನು ಮನೆಮನೆಗೆ ತಲುಪಿಸಲು ಕ್ರಮ

'ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಎಲ್ಲಾ ಜನರಿಗೂ ಆರೋಗ್ಯ ಸೇವೆಯನ್ನು ಪಡೆಯುವ ಅವಕಾಶಗಳನ್ನು ಕಲ್ಪಿಸಲಾಗಿದೆ' ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟಿನ ಟ್ರಸ್ಟಿ ಅಂಬಿಕಾ ಎಂ. ಹುಲಿನಾಯ್ಕರ್ ತಿಳಿಸಿದರು.

ತಾಲೂಕಿನ ನರಸೀಪುರ ಗ್ರಾಮದ ಆತ್ಮರಾಮ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಕುಟುಂಬ ದತ್ತುಸ್ವೀಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ನರಸೀಪುರ ಗ್ರಾಮದ ಸುಮಾರು 500 ಕುಟುಂಬಗಳನ್ನು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಆಸ್ಪತ್ರೆಯು ದತ್ತುಪಡೆದಿರುವುದು ಹೆಮ್ಮೆಯ ವಿಷಯವಾಗಿದೆ ಹಾಗೂ ರಾಷ್ಟ್ರ ಮತ್ತು ರಾಜ್ಯಮಟ್ಟದ ಎಲ್ಲಾ ಆರೋಗ್ಯ ಶಿಬಿರಗಳು, ಕಾರ್ಯಕ್ರಮಗಳು ಮತ್ತು ಸರ್ಕಾರದ ಎಲ್ಲಾ ಆರೋಗ್ಯ ಕಾರ್ಯಕ್ರಮಗಳನ್ನು ಈ ಜನರ ಮನೆಯ ಬಾಗಿಲಿಗೆ ತಲುಪಿಸುವ ಸೌಲಭ್ಯವನ್ನು ನಮ್ಮ ಆಸ್ಪತ್ರೆಯ ವತಿಯಿಂದ ಕಲ್ಪಿಸಲಾಗಿದೆ' ಎಂದರು.



ತುಮಕೂರು ತಾಲೂಕಿನ ನರಸೀಪುರ ಗ್ರಾಮದ ಆತ್ಮರಾಮ ಸಮುದಾಯ ಭವನದಲ್ಲಿ ಈ ದತ್ತುಸ್ವೀಕಾರ ಕಾರ್ಯಕ್ರಮ ನಡೆಯಿತು. ಗ್ರಾಮ ಪಂಚಾಯಿತಿ ಸದಸ್ಯರಾದ ಜಿ. ನಾಗರಾಜು, ಶೋಭಾರಾಣಿ, ನರೇಂದ್ರ ಬಾಬು, ಪ್ರಕಾಶ್, ಸಿದ್ದಲಕ್ಷ್ಮಮ್ಮ, ವೆಂಕಟಾಚಲಯ್ಯ, ಭೀಮರಾಜು, ರಾಮಮೂರ್ತಿ, ರಾಮಗಿರಿಗೌಡ, ಲಿಂಗಮೂರ್ತಿ, ಬೈಲಪ್ಪ, ಮಂಜುನಾಥ್, ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಪ್ರದೀಪ್‌ಕುಮಾರ್ ವೆಗ್ಗಿ, ಶ್ರೀದೇವಿ ವಿದ್ಯಾಲಯದ ವೈದ್ಯಶಾಸ್ತ್ರ ವಿಭಾಗದ ಡಾ.ಪಿ.ಎನ್.ರವೀಶ್, ಡಾ.ಕುಸುಮ, ಡಾ.ಸೌಂದರ್ಯ, ಸೌಜನ್ಯ, ಡಾ. ಪ್ರೀತಿ ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಮಾಜ ಸೇವಕ ಭೈರಣ್ಣ ಮಾತನಾಡಿ, 'ವೈದ್ಯಶಾಸ್ತ್ರ ಬಹಳ ಪುರಾತನವಾದದ್ದು. ಇಂದು ಮನೆ ಮದ್ದು ದೂರಸರಿದಿದೆ. ಪ್ರತಿಯೊಂದಕ್ಕೂ ವೈದ್ಯರ ಸೇವೆ ಅಗತ್ಯವಾಗಿದೆ. ವೈದ್ಯರು ಪ್ರೀತಿ ವಿಶ್ವಾಸದಿಂದ, ನಗುನಗುತ್ತಾ ಚಿಕಿತ್ಸೆ ನೀಡಿದರೆ ರೋಗಿಗಳು ಶೀಘ್ರವಾಗಿ ಗುಣಮುಖರಾಗಿರುತ್ತಾರೆ. ದತ್ತುಸ್ವೀಕಾರಕ್ಕಾಗಿ ನರಸೀಪುರ ಗ್ರಾಮವನ್ನು ಆಯ್ಕೆಮಾಡಿಕೊಂಡಿದ್ದಕ್ಕೆ ಡಾ. ಎಂ.ಆರ್. ಹುಲಿನಾಯ್ಕರ್, ಟ್ರಸ್ಟಿ ಅಂಬಿಕಾ ಎಂ. ಹುಲಿನಾಯ್ಕರ್ ಹಾಗೂ ಇತರ ಎಲ್ಲಾ ವೈದ್ಯರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ' ಎಂದು ಅವರು ಹೇಳಿದರು.

ಗ್ರಾಮ ಪಂಚಾಯತಿ ಅಧ್ಯಕ್ಷ ರಾಮಾಂಜಿನಪ್ಪ ಮಾತನಾಡಿ, 'ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಆಸ್ಪತ್ರೆಯ ವತಿಯಿಂದ ಆರೋಗ್ಯ ಸೇವೆಯ 500 ಮನೆಗಳನ್ನು ದತ್ತು ತೆಗೆದುಕೊಂಡಿದೆ. ಇಲ್ಲಿಯ ಪ್ರತಿಯೊಂದು ಮನೆಗೂ ವೈದ್ಯಕೀಯ ವಿದ್ಯಾರ್ಥಿಗಳು ಭೇಟಿ ನೀಡಿ ಅಲ್ಲಿರುವ ಜನರ ಸಮಸ್ಯೆಗಳನ್ನು ಗುರುತಿಸುತ್ತಾರೆ. ಇಲ್ಲಿಯ ಜನರ ಸಮಸ್ಯೆಗಳಿಗೆ ಪರಿಹಾರಗಳನ್ನು ನೀಡುವುದು ತುಂಬಾ ಸಂತೋಷದ ವಿಚಾರವಾಗಿದೆ' ಎಂದು ತಿಳಿಸಿದರು.

### ಸಾವಿನಲ್ಲಿಯೂ ಸಾರ್ಥಕತೆ

# ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ದೇಹದಾನ

"ದೇಹದಾನ ಎನ್ನುವುದು ಒಂದು ಪವಿತ್ರವಾದ ದಾನವಾಗಿದೆ, ಇದು ಮನುಷ್ಯನ ಜೀವಿತಾವಧಿಯಲ್ಲಿ ಮಾಡುವ ಕೊನೆಯ ದಾನ. ತಮ್ಮ ಮರಣಾನಂತರ ದೇಹವನ್ನು ನೆಲದಲ್ಲಿ ಹೂಳುವ ಅಥವಾ ಸುಡುವುದರ ಬದಲಾಗಿ, ಮಾನವನು ತನ್ನ ಸಾರ್ಥಕತೆಯನ್ನು ಸಾಧಿಸಲು ಮಾಡುವ ಅತ್ಯುತ್ತಮ ಸೇವೆಯೇ ದೇಹದಾನ" ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಅಂಗರಚನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶಿವಲೀಲಾ ಅವರು ಹೇಳಿದ್ದಾರೆ.

ಪಂಚಭೂತಗಳಲ್ಲಿ ಲೀನವಾಗಲಿದ್ದ ತಮ್ಮ ದೇಹವನ್ನು ವೈದ್ಯಕೀಯ ಅಧ್ಯಯನಕ್ಕೆ ದಾನವಾಗಿ ನೀಡುವ ಮೂಲಕ ಎಸ್. ರಾಮಸುಬ್ರಮಣಿಯನ್ ಅವರು ಸಾವಿನಲ್ಲಿಯೂ ಸಾರ್ಥಕತೆಯನ್ನು ಮೆರೆದಿದ್ದಾರೆ ಮತ್ತು ಇತರರಿಗೆ ಸ್ಫೂರ್ತಿಯಾಗಿದ್ದಾರೆ. ಮರಣಾನಂತರ ದೇಹವನ್ನು ವೈದ್ಯಕೀಯ ಅಧ್ಯಯನಕ್ಕಾಗಿ ದಾನ ಮಾಡಬೇಕೆಂಬ ತಮ್ಮ ಇಂಗಿತವನ್ನು ಶ್ರೀಯುತರು ತಮ್ಮ ಜೀವಿತಾವಧಿಯಲ್ಲಿಯೇ ವ್ಯಕ್ತಪಡಿಸಿದ್ದರು.

ಎಸ್. ರಾಮಸುಬ್ರಮಣಿಯನ್ ಅವರು ವಾಣಿಜ್ಯ ಪದವೀಧರರಾಗಿದ್ದು, ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ (ಐ.ಸಿ.ಎ.ಐ.) ಸಹ ಸದಸ್ಯರೂ ಆಗಿ, 1975ರಲ್ಲಿ ಅದರ ಸದಸ್ಯರಾದರು. ನೇರ ಮತ್ತು ಪರೋಕ್ಷ ತೆರಿಗೆಗಳ ಕ್ಷೇತ್ರಗಳಲ್ಲಿ ನಾಲ್ಕು ದಶಕಗಳ ಅನುಭವವನ್ನು ಹೊಂದಿದ್ದರು.

ಸಾರ್ವಜನಿಕವಲಯದ ದೈತ್ಯ ನಿಗಮವಾದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್‌ನಲ್ಲಿ ಅಲ್ಪಾವಧಿಯ ಸೇವೆಯ ಅನಂತರ 1981ರಲ್ಲಿ 'ಮಣಿಯನ್ ಸುರೇಶ್ ಸುಂದರ್ ವಿಠಲ್' (ಎಂ.ಎಸ್.ಎಸ್.ವಿ) ಎಂಬ ಆರ್ಥಿಕ ಸಲಹಾಸಂಸ್ಥೆಯನ್ನು ಸ್ಥಾಪಿಸಿದರು. ಹಣಕಾಸು ವಿಷಯದಲ್ಲಿನ ಕನ್ಸಲ್ಟೆನ್ಸಿ ಮತ್ತು ಟ್ಯಾಕ್ಸ್ ಕನ್ಸಲ್ಟೆನ್ಸಿ ಸೇವೆಗಳ ಜೊತೆಗೇ ಭಾರತದ ಅನೇಕ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅವರು ಅಬಕಾರಿ ಸುಂಕ, ವ್ಯಾಟ್ ಮತ್ತು ಜಿ.ಎಸ್.ಟಿ. ಸೇರಿದಂತೆ ಹಲವು ಪರೋಕ್ಷ ತೆರಿಗೆಗಳ ವಿಷಯದಲ್ಲಿ ಸಲಹೆಗಾರರೂ ಆಗಿದ್ದರು. ಅವರು ತಮ್ಮ ಕಕ್ಷಿದಾರರ ಪರವಾಗಿ ಆದಾಯ ತೆರಿಗೆ ಮೇಲ್ಮನವಿ ಪ್ರಾಧಿಕಾರಗಳ ಮುಂದೆ ಹಾಜರಾಗುತ್ತಿದ್ದರು.



ಐಸಿಎಐ ನಡೆಸುವ ವಿವಿಧ ಸೆಮಿನಾರ್‌ಗಳು ಮತ್ತು ಸಮ್ಮೇಳನಗಳಲ್ಲಿ ಅವರು ನಿಯಮಿತವಾಗಿ ಭಾಗವಹಿಸಿ ಅವುಗಳಿಗೆ ತಮ್ಮ ಅನುಭವದ ಆಧಾರದ ಮೇಲೆ ಮೌಲ್ಯಯುತವಾದ ಕೊಡುಗೆಗಳನ್ನು ನೀಡುತ್ತಿದ್ದರು. ಅವರು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟಕ್ಕೆ (ಎಫ್.ಕೆ.ಸಿ.ಸಿ.ಐ) ಪರೋಕ್ಷ ತೆರಿಗೆ ಸಮಿತಿಯ ಸದಸ್ಯರಾಗಿದ್ದರು. ಎಫ್.ಕೆ.ಸಿ.ಸಿ.ಐ.ನಲ್ಲಿ ಅವರು ಕರ್ನಾಟಕ ರಾಜ್ಯದ ವ್ಯಾಪಾರ ಮತ್ತು ಉದ್ಯಮಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಪ್ರಮುಖ ಸದಸ್ಯರಾಗಿದ್ದರು. ದಿವಂಗತ ರಾಮಸುಬ್ರಮಣಿಯನ್ ಅವರು ಐ.ಸಿ.ಎ.ಐ. ನಡೆಸಿದ ವ್ಯಾಟ್ ಕಾರ್ಯಕ್ರಮಗಳ ನಿರ್ದೇಶಕರಾಗಿದ್ದರು. ಭಾರತದಲ್ಲಿ ಇತ್ತೀಚೆಗೆ ಪರಿಚಯಿಸಲಾದ ಜಿ.ಎಸ್.ಟಿ. ಕಾನೂನಿನ ಆಳವಾದ ಅಧ್ಯಯನವನ್ನು ಅವರು ಮಾಡಿದ್ದರು ಮತ್ತು ಜಿ.ಎಸ್.ಟಿ.ಯನ್ನು ಕುರಿತು ಗ್ರಾಹಕರಿಗೆ ಸಲಹೆಗಳನ್ನು ನೀಡುತ್ತಿದ್ದರು. ಅವರು ಬೆಂಗಳೂರಿನ ಐಐಎಂನಲ್ಲಿ ಸಂದರ್ಶಕ ಅಧ್ಯಾಪಕರಾಗಿದ್ದರು.

ಮೃತರ ಇಚ್ಛೆಯಂತೆ ಅವರ ಕುಟುಂಬದವರು ಅವರ ದೇಹವನ್ನು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಅಂಗರಚನಶಾಸ್ತ್ರ ವಿಭಾಗಕ್ಕೆ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೋಸ್ಕರ ದಾನಮಾಡಿದ್ದಾರೆ. ರಾಮಸುಬ್ರಮಣಿಯನ್ ಅವರ ಆತ್ಮಕ್ಕೆ ಮತ್ತು ಮೃತರ ಕುಟುಂಬಕ್ಕೆ ಭಗವಂತನು ಒಳ್ಳೆಯದನ್ನು ಮಾಡಲಿ ಎಂದು ಆಶಿಸುತ್ತಾ ದೇಹದಾನದ ಕಾರ್ಯಕ್ಕೆ ಸಹಕರಿಸಿದ ಮೃತರ ಕುಟುಂಬದ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಅರ್ಪಿಸಿದರು.

▪ ವರದಿ: ಎನ್. ಆನಂದ



## ಗ್ರಾಮೀಣ ಕರ್ನಾಟಕ ಆರೋಗ್ಯ ಕ್ಷೇತ್ರದ ಮಾಹಿತಿ

ಕರ್ನಾಟಕದ ಗ್ರಾಮೀಣ ಜನರ ಆರೋಗ್ಯ ವಿಚಾರವನ್ನು ಕುರಿತು ಕರ್ನಾಟಕ ಸರ್ಕಾರ ಕೆಲವು ಮಾಹಿತಿಯನ್ನು ನೀಡಿದೆ. ಅದರ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಶೇಕಡ 29.6ರಷ್ಟು ಜನರು ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

**ರಕ್ತದೊತ್ತಡದ ಸಮಸ್ಯೆಯಿಂದ ಬಳಲುತ್ತಿರುವವರು**
15.6%

**ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವವರು**
11.5%

**ಬಾಯಿಯ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಹಿಳೆಯರು**
26%

**ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಹಿಳೆಯರು**
18.3%

ಈ ಕಾಯಿಲೆಗಳಿಂದ ಬಳಲುತ್ತಿರುವವರು ನಿರಂತರವಾಗಿ ಆರೋಗ್ಯ ತಪಾಸಣೆ ಮತ್ತು ಔಷಧಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅವರು ಮೂತ್ರಪಿಂಡದ ವೈಫಲ್ಯ ಅಥವಾ ಹೃದಯಾಘಾತಕ್ಕೆ ಒಳಗಾಗುವ ಸಂಭವವಿರುತ್ತದೆ.

# ಸಿಂಗಲ್ ಮದರ್

▶▶ ಮೊದಲನೇ ಪುಟದಿಂದ

ಕೌಟುಂಬಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗೆ, ವಿಶೇಷವಾಗಿ ಉದ್ಯೋಗಸ್ಥ ಮಹಿಳೆಯರು ಒತ್ತಡದಿಂದ ಹೊರಬಂದು, ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ಬಗೆ, ಅವರಿಗೆ ದೊರೆಯುವ ವೈದ್ಯಕೀಯ ನೆರವು, ಇತರ ಸೇವೆ, ಸಹಾಯಗಳು ಎಲ್ಲಿ ಮತ್ತು ಹೇಗೆ ದೊರೆಯುತ್ತವೆ, ಅವುಗಳನ್ನು ಪಡೆದುಕೊಳ್ಳಲು ಯಾರನ್ನು ಸಂಪರ್ಕ ಮಾಡಬೇಕು, ಎಂಬವುಗಳನ್ನು ಆಪ್ ಮೂಲಕ ತಿಳಿದುಕೊಳ್ಳಬಹುದಾದಂತೆ ಮಾಡಿರುವ ಬಿನ್ನಿಕುಮಾರಿ ಅವರು ಇಪ್ಪತ್ತು ಸಾವಿರ ರೂಗಳ ಮೂರನೆಯ ಬಹುಮಾನಕ್ಕೆ ಭಾಜನರಾಗಿದ್ದಾರೆ. ದೂರದ ಜಾರ್ಖಂಡ್‌ನಿಂದ ಬಂದಿರುವ ಬಿನ್ನಿಕುಮಾರಿ ಅವರು ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

"ನನ್ನ ಈ ಅಲ್ಪ ಸಾಧನೆಗೆ ಬಹುಮಾನ ದೊರಕಿರುವುದು ನನಗೆ ಮತ್ತಷ್ಟು ಸಂಶೋಧನೆ ಮಾಡಲು ಪ್ರೇರಣೆಯಾಗಿದೆ. ಈ ಪ್ರಶಸ್ತಿ ಪಡೆಯಲು ನನಗೆ ಮಾರ್ಗದರ್ಶನ ನೀಡಿದ ಕಾಲೇಜಿನ ಬೋಧಕ ಮತ್ತು ಶ್ರೀದೇವಿ ಕಾಲೇಜಿನ ಆಡಳಿತ ಮಂಡಳಿಗೆ ಕೃತಜ್ಞಳಾಗಿದ್ದೇನೆ. ಅವರ ನಿರಂತರ ಪ್ರೋತ್ಸಾಹದ ಕಾರಣ ನನಗೆ ಈ ಮಾನ್ಯತೆ ದೊರಕಿದೆ. ಅವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ" ಎಂದು ಜಾರ್ಖಂಡ್ ಮೂಲದ ಬಿನ್ನಿಕುಮಾರಿ ಹೇಳುತ್ತಾರೆ.

## ಸದಾ ನೆನಪಿನಲ್ಲಿ ಉಳಿಯುವ ಹ್ಯಾಕಥಾನ್ ಸಮಾವೇಶ

# ದೇಶದಲ್ಲಿ ನವೋದ್ಯಮಗಳಿಗೆ ಪ್ರೋತ್ಸಾಹ

**▪ ನಿರೂಪಣೆ: ಕೆ.ಎಸ್. ರಾಜಮನ್ನಾರ್**
**ಹಿರಿಯ ಪತ್ರಕರ್ತರು**




ಶಿಕ್ಷಣ ಎಂದರೆ ಮನುಕುಲದ ಉದ್ಧಾರ. ಈ ನಿಟ್ಟಿನಲ್ಲಿ ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಶೈಕ್ಷಣಿಕ ಚಟುವಟಿಗಳಷ್ಟೇ ಅಲ್ಲದೆ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯನ್ನು (ಸಿ.ಎಸ್.ಆರ್) ನಿರ್ವಹಿಸುತ್ತಿದೆ. ಉನ್ನತ ಶಿಕ್ಷಣ ಸಂಸ್ಥೆ ಎಂದರೆ ಕೇವಲ ಪಾಠ ಮಾಡುವುದು, ಪರೀಕ್ಷೆಗಳನ್ನು ನಡೆಸುವುದು, ಫಲಿತಾಂಶ ಪ್ರಕಟಿಸಿ, ಗಣನೀಯ ಸಾಧನೆ ಮಾಡಿದ, ವಿದ್ಯಾರ್ಥಿಗಳ ಸಾಲು-ಸಾಲು ಫೋಟೋ ಪ್ರದರ್ಶನ ಮಾಡುವುದಷ್ಟಕ್ಕೆ ಸೀಮಿತವಾಗದೆ ಸಮಾಜಕ್ಕೆ ಏನು ಬೇಕು, ಜನರು ಎದುರಿಸುತ್ತಿರುವ ದೈನಂದಿನ ಸಮಸ್ಯೆಗಳಿಗೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕು, ಎಂಬವುಗಳತ್ತಲೂ ಗಮನಹರಿಸಿ, ಈ ನಿಟ್ಟಿನಲ್ಲಿಯೂ ಕಾರ್ಯನಿರತವಾಗಿದೆ. ಇದಕ್ಕಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆಯು ರಾಷ್ಟ್ರಮಟ್ಟದ ಹ್ಯಾಕಥಾನ್‌ನ್ನು ಏರ್ಪಡಿಸಿತ್ತು. ಈ ಕಾರ್ಯಕ್ರಮ ಅಕ್ಟೋಬರ್ 29 ಮತ್ತು 30 ರಂದು ಇಡೀ ದಿನ ನಡೆಯಿತು.

ಇಪ್ಪತ್ತೆರಡು ವರ್ಷ ಪೂರೈಸಿರುವ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯು ಸಾಕಷ್ಟು ಕಾರ್ಪೊರೇಟ್ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಪ್ರತಿಭಾವಂತರನ್ನು ಹುಡುಕಿ, ಅವರನ್ನು ಸಮಾಜದ ಆಸ್ತಿಯನ್ನಾಗಿ ಮಾಡುವ ಕಾರ್ಯದಲ್ಲಿ ತೊಡಗಿದೆ.

ಕೃಷಿ, ಮೆಡಿಕಲ್‌ಕೇರ್ ಮತ್ತು ಪರಿಸರ ವಿಚಾರಗಳನ್ನು ಮುಂದಿಟ್ಟುಕೊಂಡು, ಈ ಸಮಸ್ಯೆಗಳಿಗೆ ಪರಿಹಾರ ರೂಪಿಸಲು ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರತರುವ, ಅವರು ಸಮಾಜದಿಂದ ಪಡೆದುಕೊಂಡದ್ದನ್ನು ಸಮಾಜಕ್ಕೆ ಮರಳಿ ಕೊಡುವಂತೆ ಮಾಡುವ ಘನ ಉದ್ದೇಶಕ್ಕಾಗಿ ಹ್ಯಾಕಥಾನ್ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು.

ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕಗಳಿಂದ ಎಂಟನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ವಿದ್ಯಾರ್ಥಿಗಳಲ್ಲಿ ಹೊಸ ಚಿಂತನೆಗಳು ಮೂಡುತ್ತವೆ ಮತ್ತು ಕ್ರಿಯಾಶೀಲತೆ ಬೆಳೆಯುತ್ತದೆ.

### ಹ್ಯಾಕಥಾನ್ ಸಮಾವೇಶಕ್ಕೆ ಪ್ರೋತ್ಸಾಹ ನೀಡಿದವರು

- **ಡಾ. ಎಂ.ಆರ್. ಹುಲಿನಾಯ್ಕರ್**
  ಸಂಸ್ಥಾಪಕ ಅಧ್ಯಕ್ಷರು,
  ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳು
- **ಡಾ. ರಮಣ ಎಂ. ಹುಲಿನಾಯ್ಕರ್**
  ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು
- **ಎಂ.ಎಸ್. ಪಾಟೀಲ್**
  ನಿರ್ದೇಶಕರು, ಐ.ಟಿ. ಮತ್ತು ಹೆಚ್.ಆರ್.
- **ಡಾ. ಲಾವಣ್ಯ ರಮಣ**
  ಪ್ರಾಧ್ಯಾಪಕರು, ನೇತ್ರ ವಿಭಾಗ ಮತ್ತು ಟ್ರಸ್ಟಿ,
- **ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್**
  ಆಡಳಿತಾಧಿಕಾರಿ ಮತ್ತು ಟ್ರಸ್ಟಿ

ಕೈಗಾರಿಕೆಗಳು ತಮಗೆ ಬೇಕಾದ ಪ್ರತಿಭಾವಂತರನ್ನು ಹುಡುಕಿಕೊಳ್ಳುವ ಕೆಲಸಕ್ಕೆ ಹ್ಯಾಕಥಾನ್ ಕಾರ್ಯಕ್ರಮವು ನೆರವಾತ್ತದೆ. ಇದರಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ನೀಡಲಾಯಿತು. ತಮಿಳುನಾಡಿನಿಂದ ಇಪ್ಪತ್ತು, ಆಂಧ್ರಪ್ರದೇಶದಿಂದ ಹದಿನೈದು, ತೆಲಂಗಾಣದಿಂದ ಐದು ಮತ್ತು ಕರ್ನಾಟಕದಿಂದ ಎಂಟನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದರಲ್ಲಿ ಭಾಗಿಯಾಗಿದ್ದರು. ಪ್ರತಿ ತಂಡದಲ್ಲಿ ಕಾಲೇಜಿನ ನಾಲ್ಕು ವಿದ್ಯಾರ್ಥಿಗಳು ತಮಗೆ ವಹಿಸಿಕೊಟ್ಟ ವಿಷಯದ ಮೇಲೆ 24 ಗಂಟೆಗಳಿಗೂ ಹೆಚ್ಚು ಕಾಲ ಅನ್ವೇಷಣೆ ನಡೆಸಿ ತೀರ್ಪುಗಾರರ ಸಮ್ಮುಖದಲ್ಲಿ ಅದನ್ನು ಪ್ರದರ್ಶಿಸಿದರು. ಒಟ್ಟು ಮೂರು ಬಹುಮಾನಗಳ ಪೈಕಿ ಎರಡನ್ನು ತುಮಕೂರಿನ ವಿದ್ಯಾರ್ಥಿಗಳೇ ಗಳಿಸಿಕೊಂಡಿರುವುದು ಸಂತೋಷದ ವಿಷಯ.

"ಈ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ದೇಶದಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ರೂಪಿಸಿ ಕೈಗಾರಿಕೆಗಳ ಆವಶ್ಯಕತೆಗಳನ್ನು ಪೂರೈಸುವುದರಿಂದ ದೇಶದ ಆರ್ಥಿಕ ಬೆಳವಣಿಗೆಗೆ ಇಂತಹ ಸಮಾವೇಶಗಳಿಂದ ಸಹಾಯವಾಗುತ್ತದೆ. ಯುವಸಮುದಾಯವನ್ನು ಸಿದ್ಧಪಡಿಸುವ ಇಂತಹ ಕೆಲಸವನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ಪರಿಣಾಮಕಾರಿಯಾಗಿ ಮಾಡುತ್ತಿದೆ. ಈ ಕಾರ್ಯಕ್ರಮದ ಬಗೆಗೆ ಭಾಗವಹಿಸಿದ್ದ ಎಲ್ಲ ಗಣ್ಯರು ತಮ್ಮ ಪ್ರಶಂಸೆ ವ್ಯಕ್ತಪಡಿಸಿದರು. ಈ ದೇಶದ ಸಮಸ್ಯೆಗಳಿಗೆ ಯುವಕರೇ ಪರಿಹಾರ ಮತ್ತು ದೇಶದ ಭವ್ಯಭವಿಷ್ಯಕ್ಕೆ ಯುವಕರೇ ನಿರ್ಣಾಯಕ. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಹಾಗೂ ಅನ್ವೇಷಕ ಪ್ರತಿಭೆಗಳನ್ನು ಪ್ರೋತ್ಸಾಹಿಸಿ, ಪ್ರತಿಭಾವಂತರಿಗೆ ಉತ್ತಮ ವೇದಿಕೆ ಕಲ್ಪಿಸಿಕೊಡುವುದು ಕಾರ್ಯಕ್ರಮದ ಗುರಿಯಾಗಿತ್ತು" ಎಂದು ಶ್ರೀದೇವಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ .ಆರ್. ಹುಲಿನಾಯ್ಕರ್ ಹೇಳಿದರು.

ಅಧ್ಯಯನಗಳ ವರದಿಗಳ ಪ್ರಕಾರ ದೇಶದಲ್ಲಿ ಪ್ರತಿವರ್ಷ 15 ಲಕ್ಷ ಇಂಜಿನಿಯರಿಂಗ್ ಪದವೀಧರರು ಶಿಕ್ಷಣ ಮುಗಿಸಿ ಬರುತ್ತಿದ್ದರೂ ಕೇವಲ ಆರು ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗಾವಕಾಶಗಳು ಲಭಿಸುತ್ತಿವೆ. ವಿವಿಧ ಕ್ಷೇತ್ರಗಳಲ್ಲಿ ಕೌಶಲವು ಇಲ್ಲದಿರುವುದೇ ಹೆಚ್ಚಿನವರಿಗೆ ಅವಕಾಶಗಳು ದೊರಕದೆಯಿರಲು ಕಾರಣ ಎಂಬ ವಾಸ್ತವವನ್ನು ಅರಿತುಕೊಳ್ಳಬೇಕು. ಕೈಗಾರಿಕೆಗಳ ಅಗತ್ಯಕ್ಕೆ ತಕ್ಕ ಕೌಶಲಗಳನ್ನು ಬೆಳೆಸಿಕೊಳ್ಳಬೇಕಿದೆ. ದಕ್ಷತೆ ಮತ್ತು ಸಾಮರ್ಥ್ಯ ಬೆಳಸಿಕೊಂಡರೆ ಮಾತ್ರ ಉದ್ಯೋಗ ಮಾರುಕಟ್ಟೆಯಲ್ಲಿ ಅವಕಾಶಗಳು ತಾವಾಗಿಯೇ ಬರುತ್ತವೆ. ದೇಶದ ಒಳಗೆ ಮತ್ತು ಹೊರಗೆ ಉದ್ಯೋಗಾವಕಾಶಗಳು ಹೇರಳವಾಗುತ್ತಿವೆ. ಆದುದರಿಂದ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿದೆಯೆಂದು ಗೊಣಗಾಡುವುದಕ್ಕೆ ಬದಲಾಗಿ ನೈಪುಣ್ಯ ಮತ್ತು ಸಾಮರ್ಥ್ಯಗಳನ್ನು ವೃದ್ಧಿಪಡಿಸಿಕೊಂಡರೆ ಅವಕಾಶಗಳು ಹುಡುಕಿಕೊಂಡು ಬರಲಿವೆ ಎಂಬ ಆತ್ಮವಿಶ್ವಾಸವನ್ನು ಯುವಕರು ಬೆಳೆಸಿಕೊಳ್ಳಬೇಕು.

'ಮೇಕ್ ಇನ್ ಇಂಡಿಯಾ', 'ಚೀನಾ ಪ್ಲಸ್' ಧೋರಣೆಗಳು ದೇಶದಲ್ಲಿ ನವೋದ್ಯಮಗಳಿಗೆ ಅವಕಾಶಗಳನ್ನು ಹೆಚ್ಚಿಸಲಿವೆ. ಅದರಲ್ಲೂ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದಲ್ಲಿ ಹೆಚ್ಚಿನ ಅವಕಾಶ ದೊರೆಯಲಿವೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ಮನೆಯಿಂದಲೇ ಕೆಲಸಮಾಡುವ ಅವಕಾಶಗಳು ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಯಾಗಲಿವೆ. ಇವುಗಳನ್ನು ಸದುಪಯೋಗಪಡಿಸಕೊಳ್ಳಲು ಯುವ ವೃತ್ತಿಪರರು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ.

## ಕೌಶಲವುಳ್ಳ ಯುವಜನಾಂಗವೇ ಭಾರತದ ಸಂಪತ್ತು

**ಡಾ.ವೆಂಕಟೇಶ್ವರಲು, ತುಮಕೂರು ವಿಶ್ವವಿದ್ಯಾಲಯದ ಕುಲಪತಿಗಳು**

ಜಗತ್ತು ಇಂದು ಭಾರತದ ಕಡೆ ನೋಡುತ್ತಿದೆ. ಇದರ ಕಾರಣವನ್ನು ಬಿಡಿಸಿ ಹೇಳಬೇಕಿಲ್ಲ. ಅತಿ ಹೆಚ್ಚು ಕುಶಲತೆಯನ್ನುಳ್ಳ ಯುವಜನಾಂಗವನ್ನು ಹೊಂದಿರುವ ದೇಶಗಳ ಸಾಲಿನಲ್ಲಿ ಭಾರತಕ್ಕೆ ಅಗ್ರಗಣ್ಯ ಸ್ಥಾನವಿದೆ. ಮುಂದಿನ 20-25 ವರ್ಷಗಳಲ್ಲಿ ದೇಶದ ಜನಸಂಖ್ಯೆಯಲ್ಲಿ ಶೇಕಡ 50ಕ್ಕಿಂತಲೂ ಹೆಚ್ಚಿನ ಭಾಗ ಯುವಕರೇ ಇರುವುದರಿಂದ ಭವಿಷ್ಯದಲ್ಲಿ ಯುವಸಂಪನ್ಮೂಲವೇ ದೇಶದ ಆಸ್ತಿಯಾಗಲಿದೆ. ಒಂದು ಕಾಲಕ್ಕೆ ಜನಸಂಖ್ಯೆ ಎಂಬುದು ದೇಶಕ್ಕೆ ಶಾಪವಾಗಿ ಕಾಡುತ್ತಿತ್ತು. ಆದರೆ ಬದಲಾದ ಸನ್ನಿವೇಶದಲ್ಲಿ ಯುವಸಂಪನ್ಮೂಲವನ್ನು ಬಳಕೆ ಮಾಡಿಕೊಳ್ಳುವಲ್ಲಿ ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು ತೋರಿಸುತ್ತಿರುವ ಪ್ರೋತ್ಸಾಹದಿಂದಾಗಿ ಯುವಜನಾಂಗವು ದೇಶದ ಆಸ್ತಿಯಾಗುತ್ತಿದೆ. ಭಾರತದ ಪಾಲಿಗೆ ಈ ಬೆಳವಣಿಗೆ ಅತ್ಯಂತ ಮಹತ್ವದ್ದಾಗಿದೆ. 21ನೇ ಶತಮಾನವು ಭಾರತೀಯರ ಶತಮಾನ. ದೇಶವನ್ನು ಪ್ರತಿಭಾವಂತರ ನಾಡನ್ನಾಗಿಸುವಲ್ಲಿ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ವಹಿಸುತ್ತಿರುವ ಪಾತ್ರಗಳೂ ಇದಕ್ಕೆ ಕಾರಣವಾಗಿದೆ. ಹಿಂದೆ ಬಡತನ ದೇಶದ ಪ್ರಗತಿಯ ಪಥದಲ್ಲಿ ದೊಡ್ಡ ಅಡೆ-ತಡೆಯನ್ನೊಡ್ಡುತ್ತಿತ್ತು. ಇದರಿಂದಾಗಿ ಎಷ್ಟೋ ಜನ ಪ್ರತಿಭಾವಂತರು ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗದಂತಹ ದಾರುಣ ಪರಿಸ್ಥಿತಿ ಇತ್ತು. ಆದರೆ ಇಂದು ಬಡತನ ಕಡಿಮೆಯಾಗಿದೆ, ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಶಿಕ್ಷಣ ಪಡೆಯುವ ಅವಕಾಶಗಳು ಹೆಚ್ಚಾಗುತ್ತಿವೆ. 2047ರ ವೇಳೆಗೆ ದೇಶವು ಸ್ವತಂತ್ರಗೊಂಡು ನೂರು ವರ್ಷಗಳನ್ನು ಪೂರೈಸಲಿದೆ. ಆ ವೇಳೆಗೆ ವಿಕಸಿತ ಭಾರತದ ಕನಸು ಸಾಕಾರಗೊಳ್ಳಲಿದೆ. ಇಂದು ಭಾರತವು ಅಭಿವೃದ್ಧಿಹೊಂದಿದ ರಾಷ್ಟ್ರವಾಗಿ ರೂಪಗೊಳ್ಳುವತ್ತ ದಾಪುಗಾಲುಹಾಕುತ್ತಿದೆ.

ಯುವಸಮುದಾಯದ ಕೊಡುಗೆಯಿಂದಾಗಿ ವಿಶ್ವದ ಜಿಡಿಪಿಯಲ್ಲಿ ನಮ್ಮ ದೇಶವು ನಾಲ್ಕನೇ ಸ್ಥಾನವನ್ನು ಗಳಿಸಿದ್ದು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಜಗತ್ತಿನ ಮೂರನೆಯ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ರೂಪುಗೊಳ್ಳುವ ಪ್ರಯತ್ನದಲ್ಲಿದೆ. ಅಹಿಂಸಾತತ್ವವನ್ನು ಸಾರಿದ ರಾಷ್ಟ್ರಪಿತ ಮಹಾತ್ಮ ಗಾಂಧಿ ಹಾಗೂ ಭಾರತದ ಯುವಶಕ್ತಿಯ ಮಹತ್ವವನ್ನು ಜಗತ್ತಿಗೆ ತಿಳಿಯಪಡಿಸಿದ ಸ್ವಾಮಿ ವಿವೇಕಾನಂದರು ನೀಡಿದ ಕೊಡುಗೆ ಚಿರಸ್ಮರಣೀಯ. ಭಾರತವು ಈ ಹಿಂದೆಯೂ ಜಗತ್ತಿಗೆ ಮಾದರಿಯಾಗಿತ್ತು. ಆದರ್ಶವಾಗಿತ್ತು ಮತ್ತು ಮುಂದೆಯೂ ಆ ಹಾದಿಯಲ್ಲಿಯೇ ಮುಂದುವರಿಯಲಿದೆ. ಈ ಕಾರಣಗಳಿಂದಾಗಿ ಜಗತ್ತು ಭಾರತವನ್ನು, ಅದರ ಪ್ರಗತಿಯನ್ನು ಬಹಳ ಕುತೂಹಲದಿಂದ ಹಾಗೂ ಗೌರವದಿಂದ ನೋಡುತ್ತಿದೆ. ವಿಕಸಿತ ಭಾರತದ ಕನಸು ಯುವಕರ ಕನಸಾಗಬೇಕು ಮತ್ತು ಅದನ್ನು ಸಾಧಿಸುವ ಛಲ ಅವರಲ್ಲಿ ಮೂಡಬೇಕು.




ಡಾ.ವೆಂಕಟೇಶ್ವರಲು ಅವರಿಗೆ ಶ್ರೀದೇವಿ ಕಾಲೇಜು ವತಿಯಿಂದ ಸನ್ಮಾನ.

## ಹ್ಯಾಕಥಾನ್‌ನ ಸಮಾರೋಪ ಸಮಾರಂಭ

# ಬಂಡವಾಳ ಹೂಡಿಕೆ ಸದ್ಯದಲ್ಲೇ ಕರ್ನಾಟಕಕ್ಕೆ ಪ್ರಥಮ ಸ್ಥಾನ

**ಡಾ. ಇ.ವಿ. ರಮಣ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಕೌಶಲ ಅಭಿವೃದ್ಧಿ ಪ್ರಾಧಿಕಾರ**

ಬಂಡವಾಳ ಹೂಡಿಕೆಯ ಮತ್ತು ತಾಂತ್ರಿಕ ಶಿಕ್ಷಣದ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿರುವುದಕ್ಕೆ ಇಲ್ಲಿನ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಕೊಡುಗೆ ಮಹತ್ತ್ವದ್ದು ಎಂದು ಕರ್ನಾಟಕ ಕೌಶಲಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಇ.ವಿ. ರಮಣರೆಡ್ಡಿ ಪ್ರತಿಪಾದಿಸಿದ್ದಾರೆ. ಕೈಗಾರಿಕೆಗಳ ಸ್ಥಾಪನೆ ಮತ್ತು ಬಂಡವಾಳ ಹೂಡಿಕೆಯಲ್ಲಿ ನೂರಕ್ಕೂ ಹೆಚ್ಚು ವರ್ಷಗಳಿಂದ ರಾಜ್ಯ ತನ್ನ ಅಗ್ರಸ್ಥಾನವನ್ನು ಕಾಪಾಡಿಕೊಂಡು ಬರುತ್ತಿದೆ. ಇದಕ್ಕೆ ಸುದೀರ್ಘ ಇತಿಹಾಸವಿದೆ. 110 ವರ್ಷಗಳ ಹಿಂದೆಯೇ ಸರ್. ಎಂ. ವಿಶ್ವೇಶ್ವರಯ್ಯ ಅವರು ಈ ನಿಟ್ಟಿನಲ್ಲಿ ನಡೆಸಿದ ಆರಂಭಿಕ ಪ್ರಯತ್ನಗಳನ್ನು ಮರೆಯಲಾಗದು. ಇಂದು ದೇಶದಲ್ಲಿ ಮತ್ತು ವಿದೇಶಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತಿವೆ. ಅದರೆ ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಕುಶಲತೆ ಮತ್ತು ಸಾಮರ್ಥ್ಯಗಳನ್ನು ತಮ್ಮಲ್ಲಿ ಬೆಳಸಿಕೊಳ್ಳಬೇಕು. ಇಂಜಿನಿಯರಿಂಗ್ ಪದವಿಯಲ್ಲಿ ಇರುವಾಗಲೇ ಒಂದು ವಿದೇಶಿ ಭಾಷೆಯನ್ನು ಕಲಿತರೆ



ವಿದೇಶಗಳಲ್ಲಿ ಕೆಲಸ ಮಾಡುವ ಅವಕಾಶಗಳು ದೊರೆಯುವುದು ಸುಲಭವಾಗುತ್ತದೆ.

ತಂತ್ರಜ್ಞಾನದ ಬೆಳವಣಿಗೆಯ ನಾಗಾಲೋಟದಿಂದಾಗಿ ಕೆಲವು ಉದ್ಯೋಗಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ ಮತ್ತು ಹಲವು ಸಾಂಪ್ರದಾಯಿಕ ಉದ್ಯೋಗಗಳಿಗೆ




ಡಾ. ಇ.ವಿ. ರಮಣ ರೆಡ್ಡಿ ಅವರಿಗೆ ಶ್ರೀದೇವಿ ಕಾಲೇಜು ವತಿಯಿಂದ ಸನ್ಮಾನ.

ಕುತ್ತುಬಂದು ಅವು ನಶಿಸಿ ಹೋಗುತ್ತಿವೆ. ಆದರೆ, ಅದೇ ಸಮಯದಲ್ಲಿ ಹೊಸ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಹೊಸ ಕಂಪನಿಗಳು ಹೆಚ್ಚಾಗುತ್ತಿವೆ ಎಂದು ಅವರು ಹೇಳಿದರು.

ವಿಶ್ವದ ಆರ್ಥಿಕ ವೇದಿಕೆಯ (ವರ್ಲ್ಡ್ ಎಕಾನಮಿಕ್ ಫೋರಂ) ಪ್ರಕಾರ 95 ದಶಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ನೀರಿಕ್ಷಿಸಲಾಗಿದೆ. ವಿದ್ಯಾರ್ಥಿಗಳು ಅಗತ್ಯವಾದ ಸಾಮರ್ಥ್ಯಗಳನ್ನು ಗಳಿಸಿಕೊಂಡರೆ ಅವರಿಗೆ ವಿಪುಲವಾದ ಉದ್ಯೋಗಾವಕಾಶಗಳು ದೊರೆಯಲಿವೆ. ಕೃತಕ ಬುದ್ಧಿಮತ್ತೆಯ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಕ್ಷೇತ್ರದಲ್ಲಿ ಆರು ಲಕ್ಷ ಉದ್ಯೋಗಗಳಿಗೆ ಬೇಡಿಕೆಯಿದ್ದು, ಸದ್ಯ ನಾಲ್ಕು ಲಕ್ಷ ಜನರು ಮಾತ್ರ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಮುಂದಿನ ಒಂದೆರಡು ವರ್ಷಗಳಲ್ಲಿ ಈ ವಲಯವೊಂದರಲ್ಲಿಯೇ ಹತ್ತು ಲಕ್ಷ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆಯಿದೆ.

ರಾಜ್ಯದ ಎರಡನೇ ಹಂತದ ನಗರಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಹಾಗಾದಾಗ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆಯಾಗುವುದಷ್ಟೇ ಅಲ್ಲದೆ ರಾಜ್ಯದಲ್ಲಿರುವ ಉತ್ತರ ಮತ್ತು ದಕ್ಷಿಣ ಎಂಬ ತಾರತಮ್ಯ, ಪ್ರಾದೇಶಿಕ ಅಸಮಾನತೆಗಳು ನಿವಾರಣೆಯಾಗಲಿವೆ.

---

### ಕಾರ್ಯಕ್ರಮ ಸಂಘಟನೆಯ ತಂಡ

- **ಡಾ. ನರೇಂದ್ರ ವಿಶ್ವನಾಥ್,** ಪ್ರಾಂಶುಪಾಲರು, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು.
- **ಡಾ. ಎಲ್. ಗಿರೀಶ್,** ಮುಖ್ಯಸ್ಥರು,. ಎ.ಐ. ಮತ್ತು ಡಿ.ಎಸ್.
- **ಎನ್. ಚೇತನ್,** ತರಬೇತಿ ಮತ್ತು ಉದ್ಯೋಗಾವಕಾಶ ನಿರ್ಮಿಸಿ ಕೊಡುವ ಅಧಿಕಾರಿ.
- **ಡಾ. ಎಸ್. ಕೃಷ್ಣಾನಂದ,** ಪ್ರಾಧ್ಯಾಪಕರು, ಎ.ಐ. ಮತ್ತು ಡಿ.ಎಸ್.
- **ಡಾ. ಕೆ.ವಿ. ಚರಣ್,** ಪ್ರಾಧ್ಯಾಪಕರು, ಐ.ಎಸ್.ಇ. • **ಡಾ. ಆರ್. ರಾಜೇಶ್ವರಿ,** ಪ್ರಾಧ್ಯಾಪಕರು ಸಿ.ಎಸ್.ಇ
- **ಡಾ. ಡಿ. ಬಸವೇಶ್,** ಮುಖ್ಯಸ್ಥರು, ಸಿ.ಎಸ್.ಇ • **ಡಾ. ರೇಖಾ,** ಮುಖ್ಯಸ್ಥರು, ಐ.ಎಸ್.ಇ.
- **ಡಾ. ಅಜೀಜ್ ಅಹಮ್ಮದ್ ಷರೀಫ್,** ಮುಖ್ಯಸ್ಥರು, ಇ.ಸಿ.ಇ

## ತಾಂತ್ರಿಕ ಶಿಕ್ಷಣ ಪಡೆದವರಲ್ಲಿ ಕೌಶಲ್ಯದ ಕೊರತೆ

**ನಹೀದಾ ಜಮ್ ಜಮ್, ಕುಲಸಚಿವೆ, ತುಮಕೂರು ವಿಶ್ವವಿದ್ಯಾಲಯ**



ಕೈಗಾರಿಕೆಗಳ ಇಂದಿನ ಅಗತ್ಯಕ್ಕೆ ತಕ್ಕಂತೆ ತಾಂತ್ರಿಕ ಶಿಕ್ಷಣದ ಪಠ್ಯಕ್ರಮ ರೂಪಿಸಬೇಕಾದ ಅಗತ್ಯವಿದೆ. ಇದರಿಂದ ವಿದ್ಯಾರ್ಥಿಗಳಿಗೆ ಪದವಿ ಮುಗಿದ ತಕ್ಷಣವೇ ಉದ್ಯೋಗಾವಕಾಶಗಳು ಲಭ್ಯವಾಗಲಿದೆ. ರಾಜ್ಯದಲ್ಲಿ ಸೈಬರ್ ಅಪರಾಧಗಳು ಮತ್ತು ಡೀಪ್‌ಫೇಕ್‌ನ ಹಾವಳಿ ಸಮಾಜದ ಶಾಂತಿಯನ್ನು ಕದಡುತ್ತಿವೆ. ಸಾಫ್ಟ್‌ವೇರ್ ಇಂಜಿನಿಯರಿಂಗ್ ಪದವೀಧರರು ಇಂತಹ ಸಮಸ್ಯೆಗಳನ್ನು ಪರಿಹರಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ದೇಶದಲ್ಲಿ ಸಾಕಷ್ಟು ಉದ್ಯೋಗಗಳಿವೆ. ಆದರೆ ಅವುಗಳನ್ನು ಅತ್ಯಂತ ಸಮರ್ಥವಾಗಿ ಮತ್ತು ದಕ್ಷತೆಯಿಂದ ನಿರ್ವಹಿಸುವ ಕುಶಲತೆಯನ್ನು ಹೊಂದಿದ ಯುವಕರ ಕೊರತೆಯೂ ಇದೆ. ಆದ್ದರಿಂದ ಯುವಕರು ಸೂಕ್ತ ಕೌಶಲವನ್ನು ತಮ್ಮಲ್ಲಿ ಬೆಳೆಸಿಕೊಂಡರೆ ಭವಿಷ್ಯದಲ್ಲಿ ನಿರುದ್ಯೋಗದ ಸಮಸ್ಯೆ ಅಷ್ಟಾಗಿ ಕಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಗಳ ಪಠ್ಯಕ್ರಮದಲ್ಲಿ ಆಮೂಲಾಗ್ರವಾಗಿ ಬದಲಾವಣೆಮಾಡುವುದು ಇಂದಿನ ಅಗತ್ಯವಾಗಿದೆ. ಪ್ರಸ್ತುತ ಇಂದಿನ ಅಗತ್ಯಗಳಿಗೆ ತಕ್ಕಂತೆ ತರಬೇತಿಗಳನ್ನು ಆಧರಿಸಿದ ಶಿಕ್ಷಣವು ರೂಪುಗೊಳ್ಳಬೇಕು. ನಾವು ಹೆಚ್ಚಾಗಿ ಸ್ಮಾರ್ಟ್‌ಸಿಟಿಯನ್ನು ಕುರಿತು ಮಾತನಾಡುತ್ತೇವೆಯೇ ಹೊರತು, ಸ್ಕಿಲ್‌ಸಿಟಿಯ ಬಗೆಗೆ ಆಲೋಚನೆಯನ್ನೇ ಮಾಡುವುದಿಲ್ಲ. ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಳವಣಿಗೆಗಳಾದಂತೆ ಅವುಗಳೊಂದಿಗೇ ಅನೇಕ ಬಗೆಯ ಹೊಸ ಸಮಸ್ಯೆಗಳೂ ಹುಟ್ಟಿಕೊಂಡು ಸಮಾಜವನ್ನು ಕಾಡಲಿವೆ. ಮೋಸ, ವಂಚನೆ ಮತ್ತು ಅಪರಾಧಗಳನ್ನು ಮಾಡಿದವರನ್ನು ಆದಷ್ಟು ಶೀಘ್ರವಾಗಿ ಪತ್ತೆಹಚ್ಚಿ ಅವರಿಗೆ ಈ ನೆಲದ ಕಾನೂನಿನಂತೆ ಶಿಕ್ಷೆ ಕೊಡಿಸಲು ಸಾಫ್ಟ್‌ವೇರ್‌ತಜ್ಞರು ನೆರವಾಗಬೇಕು. ದೇಶದ ಆಡಳಿತವು ಸರಿದಾರಿಯಲ್ಲಿ ಸಾಗುವಂತೆ ಮಾಡುವಲ್ಲಿ ಯುವಶಕ್ತಿಯ ಪಾತ್ರ ಮುಖ್ಯವಾಗಿದೆ.



ಹ್ಯಾಕಥಾನ್‌ನಲ್ಲಿ ಪುರಸ್ಕಾರ ಪಡೆದವರು.

ಚಿತ್ರಗಳು: ನವ್ಯ ಸ್ಟುಡಿಯೋ, ಪವಿತ್ರಾ ಎಸ್, ಗ್ರಾಫಿಕ್ ಡಿಸೈನರ್ ಮತ್ತು ಎನ್. ಆನಂದ್

## ಕೃಷಿವಲಯಕ್ಕೊಂದು ಆಪ್



ಬಿ.ಎಸ್. ಮೋಕ್ಷಿತ್

ಸುಸ್ಥಿರ ಕೃಷಿ ಅಭಿವೃದ್ಧಿಗೆ ಸಂಶೋಧನೆ ಅತ್ಯಗತ್ಯ. ಹವಾಮಾನ ಬದಲಾವಣೆ, ಭೂಮಿಯ ಸವಕಳಿ, ಹಸಿರು, ಮಣ್ಣಿನ ಫಲವತತ್ತತೆ, ಕಟಾವು, ಶೇಖರಣೆ ಮೊದಲಾದ ಕೃಷಿ ವಿಷಯಗಳಲ್ಲಿ ರೈತರಿಗೆ ಹೊಸ ತಂತ್ರಜ್ಞಾನವು ಅಗತ್ಯವಾಗಿದೆ. ಕೃಷಿವಲಯ ದೇಶದಲ್ಲಿ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಕೃಷಿಕರ ಸಮಸ್ಯೆ ನಿವಾರಣೆ ಮತ್ತು ಮತ್ತು ಪ್ರಯೋಜನಗಳ ಬಗೆಗೆ ಒಂದೇ ವೇದಿಕೆಯಲ್ಲಿ ಪರಿಹಾರವನ್ನು ಸಿದ್ಧಗಂಗಾ ಇನ್ಸ್ಟಿಟ್ಯೂಟ್‌ನ ಬಿ.ಎಸ್. ಮೋಕ್ಷಿತ್ ರೂಪಿಸಿದ್ದಾರೆ. ಕೃಷಿ ಪರಿಕರಗಳು, ರೈತರ ಉತ್ಪನ್ನಗಳಿಗೆ ಸುಧಾರಿತ ಮಾರುಕಟ್ಟೆ ಸೌಲಭ್ಯ, ರಾಸಾಯಿನಿಕ ಗೊಬ್ಬರ ಮತ್ತು ಕೀಟನಾಶಕಗಳು ಸಿಗುವ ಸ್ಥಳ, ಎಲ್ಲಿ ಕೊಂಡರೆ ಮೋಸ–ವಂಚನೆ ಆಗುವುದಿಲ್ಲ ಎಂಬುದನ್ನು ತಮ್ಮ ಆಪ್‌ನಲ್ಲಿ ಸ್ಪಷ್ಟವಾಗಿ ಅಳವಡಿಸಿ ರೈತರು ಮೋಸ ಹೋಗುವುದನ್ನು ತಪ್ಪಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅವರ ಈ ಸಂಶೋಧನೆಯನ್ನು ತೀರ್ಪುಗಾರರು ಮೆಚ್ಚಿದರು. ಅದಕ್ಕಾಗಿ ಮೋಕ್ಷಿತ್ ಅವರು ಪ್ರಥಮ ಬಹುಮಾನಕ್ಕೆ ಆಯ್ಕೆಯಾದರು. “ನಮ್ಮಂತಹ ವಿದ್ಯಾರ್ಥಿಗಳಲ್ಲಿ ಹುಮ್ಮಸ್ಸು, ಆತ್ಮವಿಶ್ವಾಸ ಮತ್ತು ಅನ್ವೇಷಣೆಯ ಮನೋಭಾವ ಬೆಳೆಸಲು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಉತ್ತಮ ಪ್ರಯತ್ನ ನಡೆಸಿದೆ. ಇದರಿಂದಾಗಿ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರೇರಣೆ ದೊರಕಿದೆ. ಅದಕ್ಕಾಗಿ ಆಡಳಿತ ಮಂಡಲಿಗೆ ಧನ್ಯವಾದವನ್ನು ಸಮರ್ಪಿಸುತ್ತೇನೆ” ಎಂದು ಬಿ.ಎಸ್. ಮೋಕ್ಷಿತ್ ಹೇಳಿದರು.

ಬಿ.ಎಸ್. ಮೋಕ್ಷಿತ್ ತುಮಕೂರಿನ ಸಿದ್ದಗಂಗಾ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ವಿದ್ಯಾರ್ಥಿ. ರಾಷ್ಟ್ರಮಟ್ಟದ ಹ್ಯಾಕಥಾನ್‌ನಲ್ಲಿ ಪ್ರಥಮ ಬಹುಮಾನದ ಐವತ್ತು ಸಾವಿರ ನಗದು ಗಳಿಸಿ ತುಮಕೂರಿನ ಉನ್ನತ ಶೈಕ್ಷಣಿಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.

## ಒಂದೇ ಸೂರಿನಡಿ ಪರಿಹಾರ



ರೋಹಿತ್ ಕೃಷ್ಣ

ಪೌಷ್ಟಿಕ ಆಹಾರ, ನಿಯಮಿತ ವ್ಯಾಯಾಮ ಮತ್ತು ಸಾಕಷ್ಟು ನಿದ್ರೆ – ಇವು ಉತ್ತಮ ಆರೋಗ್ಯಕ್ಕೆ ಅಡಿಪಾಯ. ಆರೋಗ್ಯವನ್ನು ಕಾಪಾಡಿಕೊಂಡು ಹೇಗೆ ದೈಹಿಕವಾಗಿ ಸಮರ್ಥರಾಗಿರಬಹುದು, ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು, ಜೀವನಶೈಲಿಯನ್ನು ಯಾವ ರೀತಿ ರೂಪಿಸಿಕೊಳ್ಳಬೇಕು, ಉದ್ಯೋಗಸ್ಥರ ಮೇಲಿನ ಒತ್ತಡ ಹೇಗಿರುತ್ತದೆ ಮತ್ತು ಅವರ ಜೀವನಶೈಲಿ ಹೇಗಿರಬೇಕು ಎಂಬುದನ್ನು ತಮ್ಮ ಸಂಶೋಧನೆಯ ಮೂಲಕ ಸಮಗ್ರವಾಗಿ ಬೆಂಗಳೂರಿನ ಅಂಬೇಡ್ಕರ್ ಇನ್ಸ್ಟಿಟ್ಯೂಟಿನ ರೋಹಿತ್ ಕೃಷ್ಣ ಅವರು ತಿಳಿಸಿಕೊಟ್ಟಿದ್ದಾರೆ. ಆರೋಗ್ಯ ಕಾಪಾಡಿಕೊಳ್ಳುವುದರಿಂದ ದೊರೆಯುವ ಪ್ರಯೋಜನಗಳು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ರೀತಿ, ಒತ್ತಡದಿಂದ ಮುಕ್ತವಾದ ಜೀವನವನ್ನು ನಡೆಸಲು ಪಾಲಿಸಬೇಕಾದ ನಿಯಮಗಳು, ಆಪ್ತಸಮಾಲೋಚನೆಗಳನ್ನು ಎಲ್ಲಿ ಮತ್ತು ಹೇಗೆ ನಡೆಸಲಾಗುತ್ತದೆ ಎನ್ನುವ ವಿವರಗಳನ್ನು ಒಂದೇ ಎಡೆಯಲ್ಲಿ ದೊರಕಿಸಿಕೊಡುವ ಹಾಗೂ ಆರೋಗ್ಯದ ಸಮಸ್ಯೆಗಳಿಗೆ ಸಕಾಲದಲ್ಲಿ ಪರಿಹಾರ ಕಂಡುಕೊಳ್ಳಲು ಸಹಾಯಮಾಡುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಇದಕ್ಕಾಗಿ ಇವರ ತಂಡವು ಮೂವತ್ತು ಸಾವಿರ ರೂಗಳ ಎರಡನೆಯ ಬಹುಮಾನವನ್ನು ಪಡೆಯಿತು. “ಪ್ರತಿಭಾವಂತ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ, ರಾಷ್ಟ್ರಮಟ್ಟದಲ್ಲಿ ಅವರ ಪ್ರತಿಭೆ ಅನಾವರಣಗೊಳಿಸುವ ಕಾರ್ಯಕ್ರಮವನ್ನು ಏರ್ಪಡಿಸಿರುವುದು ಸ್ವಾಗತಾರ್ಹ. ಉನ್ನತ ಶಿಕ್ಷಣ ಸಂಸ್ಥೆಗಳು ಸಮಾಜ ಮತ್ತು ದೇಶದ ಪ್ರಗತಿಗೆ ಕಾರ್ಯಕ್ರಮವನ್ನು ಹೇಗೆ ರೂಪಿಸಬೇಕು ಎಂಬುದನ್ನು ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆ ತೋರಿಸಿಕೊಟ್ಟಿದೆ” ಎಂದು ರೋಹಿತ್ ಕೃಷ್ಣ ಅವರು ಹೇಳಿದ್ದಾರೆ.



### ಎಸ್. ಎನ್. ಸರೋಜಮ್ಮ ಹಾಗೂ ವಿಮಲಮ್ಮ ನಾರಾಯಣ ಜೋಯಿಸ್ ಪುರಸ್ಕಾರ

# ನರ್ಸಿಂಗ್ ವೃತ್ತಿಯ ಗೌರವ, ಮೌಲ್ಯಗಳನ್ನು ಹೆಚ್ಚಿಸಿದ ಪ್ರತಿಭಾ ಪುರಸ್ಕಾರ



■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು
ಸಹಕಾರ: ಡಾ. ಟಿ.ಎಸ್. ಭೀಮರಾಜು




ನರ್ಸಿಂಗ್ ವೃತ್ತಿಗೆ ವಿಶ್ವಾದ್ಯಂತ ಬೇಡಿಕೆಯಿದೆ. ಗೌರವವಿದೆ, ಮತ್ತು ಮೌಲ್ಯವಿದೆ. ಮಾನವೀಯ ಸೇವೆಯ ಜೊತೆಗೆ, ನರ್ಸಿಂಗ್ ವೃತ್ತಿಯು ಕಲೆ ಮತ್ತು ವಿಜ್ಞಾನ ಎರಡೂ ಆಗಿದೆ. ಪ್ರಪಂಚದೆಲ್ಲೆಡೆ ನಡೆಸಿದ ಸಮೀಕ್ಷೆಗಳು ಶುಶ್ರೂಷಕರ ವೃತ್ತಿ ಅತ್ಯಂತ ವಿಶ್ವಾಸಾರ್ಹ ವೃತ್ತಿ ಎಂಬುದನ್ನು ಸಾಬೀತುಪಡಿಸಿದೆ.

ಆಸ್ಪತ್ರೆಗಳಿಂದ ಹಿಡಿದು ಪುನರ್ವಸತಿ ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಗಳವರೆಗೆ, ಆಂಬ್ಯುಲೇಟರಿ ಕ್ಲಿನಿಕ್‌ಗಳು ಮತ್ತು ಮನೆಗೆ ದಾದಿಯರ ಸೇವೆಯನ್ನು ಒದಗಿಸುವ ಸಂಸ್ಥೆಗಳವರೆಗೆ ನರ್ಸಿಂಗ್ ವೃತ್ತಿಗೆ ಹೆಚ್ಚಿನ ಬೇಡಿಕೆಯಿದೆ. ವೈದ್ಯಕೀಯ ವಿಜ್ಞಾನ ಮುಂದುವರಿದಂತೆ ಮತ್ತು ನೋಂದಾಯಿತ ದಾದಿಯರಿಗೆ ಹೊಸ, ಹೊಸ ಅವಕಾಶಗಳು ಲಭ್ಯವಾಗುತ್ತಿವೆ. ಶುಶ್ರೂಷಕರ ಹುದ್ದೆಗಳ ಸಂಖ್ಯೆ ಜಾಗತಿಕ ವಲಯದಲ್ಲಿ 2028ರ ವೇಳೆಗೆ ಶೇ. 12ರಷ್ಟು ಹೆಚ್ಚಾಗುವ ನಿರೀಕ್ಷೆಯಿದ್ದು, ಇದು ಉದ್ಯಮಗಳಲ್ಲಿನ ಬೆಳವಣಿಗೆಗಿಂತಲೂ ಹೆಚ್ಚಿನ ವೇಗದ ಬೆಳವಣಿಗೆಯಾಗಿರುತ್ತದೆ ಎಂದು ಅಂದಾಜಿಸಲಾಗಿದೆ. ನರ್ಸಿಂಗ್ ವೃತ್ತಿಯು ನೀರಸವಲ್ಲ. ಅವರ ದೈನಂದಿನ ಕೆಲಸದ ವೇಳಾಪಟ್ಟಿ ಬದಲಾಗುತ್ತಿರುತ್ತವೆ. ಪ್ರತಿದಿನ ಹಲವಾರು ರೋಗಿಗಳೊಂದಿಗೆ, ಅವರ ಸಂಬಂಧಿಕರೊಂದಿಗೆ ವ್ಯವಹರಿಸಬೇಕಾಗುತ್ತದೆ. ಕೆಲಸದಲ್ಲಿ ಸವಾಲು ಎದುರಿಸಲು ಇಷ್ಟಪಡುವವರಿಗೆ ಈ ವೃತ್ತಿ ಪರಿಪೂರ್ಣ ತೃಪ್ತಿಯನ್ನು ಕೊಡುವಂತಹುದಾಗಿದೆ.

ಇಂತಹ ವೃತ್ತಿ ಗೌರವವನ್ನು ಎತ್ತಿಹಿಡಿಯುವಂತಹ ಸಮಾರಂಭ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಕಳೆದ ತಿಂಗಳು ಜರುಗಿತು. ಇದೇ ಸಂದರ್ಭದಲ್ಲಿ 2024–25 ನೆಯ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಲಾಯಿತು. ನರ್ಸಿಂಗ್ ವೃತ್ತಿಯಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಹಾಗೂ ಪ್ರತಿಭಾವಂತ ನರ್ಸಿಂಗ್ ವಿದ್ಯಾರ್ಥಿಗಳಿಗೆ ದಿವಂಗತ ಎಸ್. ಎನ್. ಸರೋಜಮ್ಮ ಹಾಗೂ ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್ ಹೆಸರಿನಲ್ಲಿ ನೀಡುವ ನಾಲ್ಕನೆಯ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿ ಜರುಗಿತು.

ಶ್ರೀದೇವಿ ಆಸ್ಪತ್ರೆಯ ನವಜಾತ ಶಿಶುಘಟಕದಲ್ಲಿ ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿರುವ ಬಿ. ವಿ. ಅನಿತಾ ಅವರಿಗೆ 2024ನೇ ಸಾಲಿನ ಶ್ರೀದೇವಿ ನೈಟಿಂಗೇಲ್ ಪುರಸ್ಕಾರ ನೀಡಿ ಗೌರವಿಸಲಾಯಿತು. ಶೈಕ್ಷಣಿಕ ಸಾಧನೆಗಾಗಿ ಪ್ರತಿಭಾ ಪುರಸ್ಕಾರಕ್ಕೆ ಭಾಜನರಾದ ಐವರು ವಿದ್ಯಾರ್ಥಿಗಳಿಗೂ ಪ್ರಮಾಣಪತ್ರ ಹಾಗೂ ನಗದು ಬಹುಮಾನಗಳನ್ನು ನೀಡಿ ಸನ್ಮಾನಿಸಲಾಯಿತು. ಇವರೆಲ್ಲರೂ ಶ್ರೀದೇವಿ ಮತ್ತು ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನವರೇ ಆಗಿರುವುದು ನಮ್ಮ ಸಂಸ್ಥೆಯ ಹಿರಿಮೆ ಮತ್ತು ಗೌರವಗಳನ್ನು ಹೆಚ್ಚಿಸಿದೆ.

ಸಮಾರಂಭದಲ್ಲಿ ಮಾತನಾಡಿದ ಗಣ್ಯರೆಲ್ಲರೂ ಜಗತ್ತಿನಾದ್ಯಂತ ನರ್ಸಿಂಗ್ ವೃತ್ತಿಗೆ ಇರುವ ಗೌರವ, ಹೊಣೆಗಾರಿಕೆ, ಜೀವ ಉಳಿಸುವಲ್ಲಿ ನಿರ್ವಹಿಸುವಲ್ಲಿ ಶುಶ್ರೂಷಕರ ಪಾತ್ರದ ಗುಣಗಾನ ಮಾಡಿದರು. ತುಮಕೂರು ಸರ್ಕಾರಿ ನರ್ಸಿಂಗ್ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಚ್.ಬಿ. ಪ್ರಕಾಶ್, ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ಮಹಾವಿದ್ಯಾಲಯ ಮತ್ತು ಸಂಶೋಧನ ಆಸ್ಪತ್ರೆಯ ಪ್ರಾಂಶುಪಾಲ ಡಾ. ಎಂ.ಎಲ್ ಹರೇಂದ್ರ ಕುಮಾರ್ ಹಾಗೂ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ. ಹುಲಿನಾಯ್ಕರ್ ಮತ್ತು ಅಮೆರಿಕಾದ ಬಿಹೇವಿಯರ್ ಸ್ಪೆಷಲಿಸ್ಟ್ ಶಾಶ್ವತೀ ಕಮಲೇಶ್ ವೃತ್ತಿಯ ಘನತೆ, ಮಹತ್ತ್ವವನ್ನು ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದ ಪ್ರಾರಂಭದಲ್ಲಿ ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಉಷಾ ಅವರು ಎಲ್ಲರನ್ನೂ ಸ್ವಾಗತಿಸಿದರು. ಕೊನೆಯಲ್ಲಿ, ಶ್ರೀದುರ್ಗಾಂಬ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಅಂಬಾ ಅವರು ವಂದನೆ ಸಲ್ಲಿಸಿದರು. ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್. ಕೆ. ಮುನಿಸ್ವಾಮಿ ಅವರು ಸಮಾರಂಭದ ವೈಶಿಷ್ಟ್ಯಗಳನ್ನು ತಿಳಿಸಿ, ದತ್ತಿ ಸ್ಥಾಪಿಸಿದ ಮೂವರು ಮಹನೀಯರನ್ನೂ ಜ್ಞಾಪಿಸಿಕೊಂಡು ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಸಮಾರಂಭದ ನಿರೂಪಣೆಯನ್ನು ಪ್ರಾಧ್ಯಾಪಕರಾದ ಡಾ. ವಿದ್ಯಾಶ್ರೀ ಅವರು ನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞೆ ಡಾ. ಪಿ. ಲಾವಣ್ಯ, ಶ್ರೀದೇವಿ ಅಂತರಂಗ ಪತ್ರಿಕೆಯ ಸಂಪಾದಕರಾದ ಡಾ. ಕೆ.ಆರ್. ಕಮಲೇಶ್ ಹಾಗೂ ಅಮೆರಿಕದ ಲೀಡ್ ಒಸ್ಕೋಶ್ ಕಾರ್ಪೋರೇಷನ್ನಿನ ಸಿಸ್ಟಮ್ ಇಂಜಿನಿಯರ್ ಎನ್. ಗುರುಮೂರ್ತಿ ಮೊದಲಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಇಲ್ಲಿ ಕೆಲವರ ಅಭಿಪ್ರಾಯಗಳನ್ನು ನೋಡೋಣ.

## ಪ್ರತಿವರ್ಷ ಎರಡು ಲಕ್ಷ ದಾದಿಯರಿಗೆ ಬೇಡಿಕೆ

**ಎಚ್. ಬಿ. ಪ್ರಕಾಶ್**



ಜಗತ್ತಿನಾದ್ಯಂತ ದಾದಿಯರಿಗೆ ವಿಪುಲ ಅವಕಾಶಗಳಿವೆ. ಕೌಶಲ ಮತ್ತು ಹೆಚ್ಚಿನ ವೃತ್ತಿ ನೈಪುಣ್ಯವನ್ನು ಗಳಿಸಿಕೊಂಡರೆ ಯಾವ ದೇಶದಲ್ಲಿಯಾದರೂ ಉತ್ತಮ ಜೀವನ ನಡೆಸಬಹುದಾಗಿದೆ. ಅದರಲ್ಲಿಯೂ ವಿಶೇಷವಾಗಿ ಜಗತ್ತನ್ನು ಬಹಳವಾಗಿ ಕಾಡಿದ ಕೋವಿಡ್ ಸಂದರ್ಭದಲ್ಲಿ ದಾದಿಯರ ಸೇವೆಗೆ ವಿಶ್ವವೇ ತನ್ನ ಕೃತಜ್ಞತೆಯನ್ನು ತಿಳಿಸಿತು. ಭಾರತವೂ ಸೇರಿದಂತೆ ಜಗತ್ತಿನಾದ್ಯಂತ ಶುಶ್ರೂಷಕರ ವೃತ್ತಿಗೆ ಬೇಡಿಕೆಯೂ ಹೆಚ್ಚಾಗುತ್ತಿದೆ. ದೇಶದಲ್ಲಿ ಪ್ರತಿವರ್ಷ ಎರಡು ಲಕ್ಷ ಶುಶ್ರೂಷಕರಿಗಾಗಿ ಬೇಡಿಕೆ ಕಂಡುಬರುತ್ತಿದೆ. ಇದನ್ನು ಮನಗಂಡ ಸರ್ಕಾರ ನರ್ಸಿಂಗ್ ಕಾಲೇಜುಗಳನ್ನು ಆರಂಭಿಸಲು ಉದಾರವಾಗಿ ಅನುಮತಿಯನ್ನು ನೀಡುತ್ತಿದೆ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸೀಟುಗಳ ಹೆಚ್ಚಳದ ವಿಷಯದಲ್ಲಿಯೂ ಉದಾರ ನೀತಿಯನ್ನು ಅನುಸರಿಸುತ್ತಿದೆ. ದೇಶದ ಉದ್ದಗಲಕ್ಕೂ ನರ್ಸಿಂಗ್ ಕಾಲೇಜುಗಳು ತಲೆಯೆತ್ತುತ್ತಿವೆ. ಕೈಗಾರಿಕೆಗಳನ್ನು ನಡೆಸುತ್ತಿದ್ದ ದೊಡ್ಡ ಉದ್ಯಮಿಗಳು ಈಗ ಆರೋಗ್ಯ ವಲಯದಲ್ಲಿ ಬಂಡವಾಳ ಹೂಡುತ್ತಿದ್ದಾರೆ. ಇದರ ಪರಿಣಾಮವಾಗಿ ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಸಹ ಖಾಸಗಿ ಕಾಲೇಜುಗಳು ಹೆಚ್ಚಾಗಿ ಸ್ಥಾಪಿತವಾಗುತ್ತಿವೆ. ರೋಗಿಗಳ ಆರೋಗ್ಯದ ಬಗೆಗೆ ಕಾಳಜಿ ವಹಿಸುವುದರಲ್ಲಿ ಡಾಕ್ಟರ್‌ಗಳ ಪಾತ್ರದಷ್ಟೇ ಮುಖ್ಯ ಪಾತ್ರವನ್ನು ದಾದಿಯರು ಕೂಡ ನಿರ್ವಹಿಸುತ್ತಿದ್ದಾರೆ. ಅವರ ಮೇಲೆ ಗುರುತರ ಹೊಣೆಗಾರಿಕೆಯಿದೆ. ದೇಶವು ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ ವೈದ್ಯಕೀಯ ವಲಯದಲ್ಲಿ ವೃತ್ತಿನಿರತ ದಾದಿಯರ ಆವಶ್ಯಕತೆ ಬಹಳಷ್ಟಿದೆ.

ಶುಶ್ರೂಷಕರ ಕೆಲಸವು ಸಾಮಾನ್ಯ ಜನರು ತಿಳಿದಿರುವಷ್ಟು ಸುಲಭದ ಕೆಲಸವಲ್ಲ. ವೈದ್ಯರ ಸಲಹೆಯನ್ನು ಅಕ್ಷರಶಃ ಪಾಲಿಸುವ ಮೂಲಕ ರೋಗಿಗಳನ್ನು ಉಳಿಸುವಲ್ಲಿ ಶುಶ್ರೂಷಕರ ಪಾತ್ರವೂ ಅಷ್ಟೇ ಪರಿಶ್ರಮವನ್ನು ಬಯಸುತ್ತದೆ. ವಿವಿಧ ಸ್ವಭಾವದ ಜನರೊಂದಿಗೆ ಅವರು ವ್ಯವಹರಿಸಬೇಕಾಗುತ್ತದೆ. ಅವರು ಸತತವಾಗಿ ರೋಗಿಗಳನ್ನು ಎಚ್ಚರಿಕೆ ಮತ್ತು ಅನುಕಂಪದಿಂದ ನೋಡಿಕೊಳ್ಳಬೇಕಾಗುತ್ತದೆ ಮತ್ತು ರೋಗಿಗಳ, ಅವರ ಸಂಬಂಧಿಕರ ಜೊತೆಯಲ್ಲಿ ಶಾಂತರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ.

## ಪದವಿಯ ನಂತರ ಕುಶಲತೆಯನ್ನು ರೂಢಿಸಿಕೊಂಡರೆ ವೃತ್ತಿಯಲ್ಲಿ ಯಶಸ್ಸು

**ಡಾ. ಎಂ ಆರ್ ಹುಲಿನಾಯ್ಕರ್**

ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಲು ಶ್ರಮಿಸುವಂತೆಯೇ ತದನಂತರದ ವೃತ್ತಿಬದುಕಿನಲ್ಲಿಯೂ ಜೀವ ಉಳಿಸುವುದರಲ್ಲೂ ಆಸಕ್ತಿಯನ್ನು ಶುಶ್ರೂಷಕರು ತೋರಬೇಕು. ಕೋವಿಡ್‌ನ ಅನಂತರ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚಾಗಿದೆ. ರೋಗಗಳು ಬಾರದಂತೆ ತಡೆಗಟ್ಟುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಕ್ರಮಗಳು ಬಹಳ ಅಗತ್ಯವಾಗಿರುತ್ತವೆ. ಈ ನಿಟ್ಟಿನಲ್ಲಿ, ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ದಾದಿಯರ ಪಾತ್ರ ಬಹಳ ಮುಖ್ಯ. ಕೋವಿಡ್‌ನ ಸನ್ನಿವೇಶದಲ್ಲಿ ಜಗತ್ತಿನ ಅನೇಕ ಮುಂದುವರಿದ ದೇಶಗಳು ಕೂಡ ಪರಿಸ್ಥಿತಿಯನ್ನು ನಿಭಾಯಿಸಲಾಗದೆ ಇದ್ದುದರಿಂದ ಬಹುಸಂಖ್ಯೆಯ ರೋಗಿಗಳು ಸಾವಿಗೆ ಶರಣಾಗಬೇಕಾಯಿತು. ಆದರೆ ನಮ್ಮ ದೇಶದಲ್ಲಿ ಕೊರೋನಾವನ್ನು ಹಿಮ್ಮೆಟ್ಟಿಸುವಲ್ಲಿ ವೈದ್ಯರ ಮತ್ತು ದಾದಿಯರ ಪಾತ್ರಗಳು ಬಹಳ ಪರಿಣಾಮಕಾರಿಯಾಗಿದ್ದವು. ಇದರಿಂದಾಗಿ ಬೇರೆ ದೇಶಗಳ ಆರೋಗ್ಯ ಕ್ಷೇತ್ರದ ಮೇಲೆ ಆದಂತಹ ದುಷ್ಪರಿಣಾಮ ನಮ್ಮಲ್ಲಿ ಆಗಲಿಲ್ಲ ಎಂಬುದು ಸಮಾಧಾನದ ಸಂಗತಿ. ಕೋವಿಡ್ ಸಂದರ್ಭದಲ್ಲಿ ವೈದ್ಯರು. ದಾದಿಯರು ಮತ್ತು ಆರೋಗ್ಯವಲಯದ ಇತರ ಕಾರ್ಯಕರ್ತರು ಸಲ್ಲಿಸಿದ ಅನುಪಮ ಸೇವೆಯನ್ನು ಇಂದಿಗೂ ಸ್ಮರಿಸಲಾಗುತ್ತಿದೆ. ಜನರ ಅಮೂಲ್ಯ ಜೀವಗಳನ್ನು ಕಾಪಾಡುವಲ್ಲಿ ಸರ್ಕಾರಿ ಸಂಸ್ಥೆಗಳು ಸಹ ಅಷ್ಟೇ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿವೆ.

## ಅನುಕಂಪ ಮತ್ತು ಸೇವೆ ನರ್ಸಿಂಗ್ ಕ್ಷೇತ್ರಕ್ಕೆ ಬರುವವರ ಪ್ರಾಥಮಿಕ ಅರ್ಹತೆ

**ಡಾ. ಎಂ ಎಲ್ ಹರೇಂದ್ರ ಕುಮಾರ್**



ಅನುಕಂಪ ಮತ್ತು ಸೇವೆ ಈ ಹುದ್ದೆಗೆ ಬೇಕಾಗುವ ಎರಡು ಮುಖ್ಯ ಅಂಶಗಳು. ಶುಶ್ರೂಷಕರ ಕೆಲಸ ಸುಲಭವಾದುದಲ್ಲ. ಅದು ಸವಾಲಿನ ವೃತ್ತಿ. ಅಲ್ಲದೆ ಅದು ಬೇರೆಯವರಿಗೆ ನಿಸ್ವಾರ್ಥ ಸೇವೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳಲು ಸ್ಫೂರ್ತಿ ಮತ್ತು ಪ್ರೇರಣೆಗಳನ್ನೂ ನೀಡುವಂತಹುದಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಶುಶ್ರೂಷಕರು ದೇಶವನ್ನು ಕಾಪಾಡುವ ನಾಯಕರು ಎಂದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಜೀವವನ್ನು ಕಾಪಾಡುವ ಕೆಲಸದಲ್ಲಿ ಹಗಲಿರುಳು ತೊಡಗಿಕೊಳ್ಳುವುದು ಸುಲಭದ ಮಾತಲ್ಲ. ವೃತ್ತಿಯಲ್ಲಿ ಅನೇಕ ಕಠಿಣ ಸವಾಲುಗಳು ಎದುರಾಗಲಿವೆ ಎಂಬ ಸತ್ಯವು ಗೊತ್ತಿದ್ದರೂ ಮಕ್ಕಳನ್ನು ಇಂತಹ ಕೋರ್ಸ್‌ಗಳಿಗೆ ಸೇರಿಸುವ ಮೂಲಕ ಅವರ ಪೋಷಕರು ಸಹ ಮಾನವೀಯ ಸೇವೆಗೆ ಬೆಂಬಲವಾಗಿ ನಿಲ್ಲುವುದು ಸಮಾಜದಲ್ಲಿನ ಅತ್ಯುತ್ತಮ ಸಕಾರಾತ್ಮಕ ಬೆಳವಣಿಗೆಯಾಗಿದೆ.

## ನೆನಪಿನಲ್ಲಿಡಬೇಕಾದ ಮಾತು

“ ಶ್ರೀಕೃಷ್ಣದೇವರಾಯ ತನ್ನ ರಾಜ್ಯದಲ್ಲಿ ಜನತೆಗೆ ಎಷ್ಟೊಂದು ಸ್ವಾತಂತ್ರ್ಯ ನೀಡಿದ್ದಾನೆಂದರೆ ಇಲ್ಲಿಗೆ ಒಬ್ಬ ಕ್ರಿಸ್ತೀಯನಾಗಲೀ, ಯಹೂದಿಯಾಗಲೀ, ಮುಸಲ್ಮಾನನಾಗಲೀ ಅಥವಾ ಹಿಂದುವಾಗಲೀ ಏನೇ ಆಗಿದ್ದರೂ ಇಲ್ಲಿಗೆ ಬಂದು ಹೋಗಬಹುದು ಹಾಗೂ ಅವನ ಮತದಂತೆ ಯಾವುದೇ ಕಿರಿಕಿರಿಗಳಿಲ್ಲದೆ ಅಥವಾ ವಿಚಾರಣೆಗಳಿಲ್ಲದೆ ಬಾಳಬಹುದು.

- 16ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ಕೊಟ್ಟಿದ್ದ ಪೋರ್ಚುಗೀಸ್ ಪ್ರವಾಸಿ ಬರ್ಬೋಸನ ಪ್ರವಾಸ ಕಥನದಲ್ಲಿರುವ ಮಾತು



## ರೋಗಿಗಳ ಮನಸ್ಸಿನಲ್ಲಿ ಉಳಿಯುವವರು ಸೇವಾದೀಕ್ಷೆಯನ್ನು ತೆಗೆದುಕೊಂಡಿರುವ ನರ್ಸ್‌ಗಳು

**ಡಾ. ರಮಣ್ .ಎಂ. ಹುಲಿನಾಯ್ಕರ್**

ಇಂಗ್ಲೆಂಡಿನ ಅತ್ಯಂತ ಶ್ರೀಮಂತ ಕುಟುಂಬದ ಹಿನ್ನೆಲೆಯಿಂದ ಬಂದ ಫ್ಲಾರೆನ್ಸ್ ನೈಟಿಂಗೇಲ್ (1820–1910) ಸಾಮಾಜಿಕ ಸಂಪ್ರದಾಯಗಳನ್ನು ಧಿಕ್ಕರಿಸಿ ಶುಶ್ರೂಷಕಿಯ ಹುದ್ದೆಯನ್ನು ಅಪ್ಪಿಕೊಂಡರು. ಬಡವರು ಹೊಟ್ಟೆಪಾಡಿಗಾಗಿ ಭವಿಷ್ಯ ಕಂಡುಕೊಳ್ಳಲು ಈ ವೃತ್ತಿಗೆ ಬರುತ್ತಾರೆ ಎಂಬ ಕಟು ಟೀಕೆಗಳಿಗೆ ನೂರಾರು ವರ್ಷಗಳ ಹಿಂದೆಯೇ ಉತ್ತರವನ್ನು ನೀಡಿ, ಜಗತ್ತಿನ ನರ್ಸಿಂಗ್ ಕ್ಷೇತ್ರದಲ್ಲಿ ಅಪರೂಪದ ಆದರ್ಶ ವ್ಯಕ್ತಿಯಾದರು. ರೋಗಿಗಳು ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳುವಾಗ, ತಮಗೆ ಆಪ್ತವಾಗುವ ರೀತಿಯಲ್ಲಿ ಸೇವೆಮಾಡಿದ ದಾದಿಯರನ್ನು ಕೊನೆಯತನಕ ನೆನಪು ಮಾಡಿಕೊಳ್ಳುತ್ತಾರೆ ಮತ್ತು ಅವರ ಮನಸ್ಸಿನಲ್ಲಿ ತಮಗೆ ದಾದಿಯರು ಸಲ್ಲಿಸಿದ ಸೇವೆ ಸದಾ ಹಸಿರಾಗಿರುತ್ತದೆ.

## ಡಾ.ಹುಲಿನಾಯ್ಕರ್ ಕುಟುಂಬಕ್ಕೆ ಸಾವಿರ ಸಲಾಂ

**ಶಾಶ್ವತೀ ಕಮಲೇಶ್**

ಅಮೆರಿಕದಲ್ಲಿರುವ ಬಿಹೇವಿಯರ್ ಸ್ಪೆಷಲಿಸ್ಟ್, ಪ್ರತಿಭಾ ಪುರಸ್ಕಾರವನ್ನು ನೀಡಿದವರು



ಇಂದಿನ ತಲೆಮಾರಿನ ಜನರ ಆರೋಗ್ಯ ಕಾಪಾಡುವುದಲ್ಲದೇ ಮುಂದಿನ ತಲೆಮಾರಿನ ಆರೋಗ್ಯವನ್ನೂ ಕಾಪಾಡುವ ದಾದಿಯರ ಕೆಲಸಕ್ಕೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಸಾಲದು. ನರ್ಸಿಂಗ್ ವೃತ್ತಿ ಸಮಾಜಕ್ಕೆ, ಬದುಕಿಗೆ ಮಾದರಿಯಾಗಿರುವ ವೃತ್ತಿಯಾಗಿದೆ. ಇಲ್ಲಿ ನರ್ಸಿಂಗ್ ವಿದ್ಯಾರ್ಥಿಗಳ ಕಲಿಕೆಗೆ ಬೇಕಾದ ಎಲ್ಲ ಅಗತ್ಯ ಮೂಲಸೌಲಭ್ಯಗಳನ್ನೂ ಒದಗಿಸಿರುವುದರಲ್ಲಿ ಇರುವ ಶ್ರೀದೇವಿ ಸಂಸ್ಥೆಯ ಆಡಳಿತ ಮಂಡಳಿಯ ಕಾಳಜಿ ಮೆಚ್ಚುಗೆಯಾಗುವ ಅಂಶ.

ನನ್ನ ಇಬ್ಬರು ಅಜ್ಜಿಯಂದಿರು ತಮ್ಮ ಜೀವನದ ಸಂಧ್ಯಾಕಾಲವನ್ನು ಶ್ರೀದೇವಿ ಕಾಲೇಜು ಆಸ್ಪತ್ರೆಯಲ್ಲೇ ಕಳೆದರು ಎನ್ನುವುದು ನನಗೆ ಮರೆಯಲಾಗದ ಸಂಗತಿ. ಹೀಗಾಗಿ ಕಾಲೇಜಿನ ಅಂಗಳ ಮತ್ತು ನನ್ನ ನಡುವೆ ಹಾಗೂ ಹುಲಿನಾಯ್ಕರ್ ಅವರ ಕುಟುಂಬ ಮತ್ತು ನಮ್ಮ ಕುಟುಂಬಗಳ ನಡುವೆ ಅಳಿಸಲಾಗದ ಅವಿನಾಭಾವ ಸಂಬಂಧವಿದೆ. ಡಾ. ಎಂ.ಆರ್. ಹುಲಿನಾಯ್ಕರ್ ಅವರ ಋಣವನ್ನು ಎಂದಿಗೂ ತೀರಿಸಲು ನನಗೆ ಸಾಧ್ಯವಿಲ್ಲ. ತುಮಕೂರಿನಲ್ಲಿ ಇಂತಹ ಶೈಕ್ಷಣಿಕ ಸಂಸ್ಥೆಯನ್ನು ನಿರ್ಮಾಣಮಾಡಿರುವ ಡಾ. ಹುಲಿನಾಯ್ಕರ್ ಅವರಿಗೂ ಮತ್ತು ಅವರೊಡನೆ ದುಡಿದಿರುವ ಮತ್ತು ದುಡಿಯುತ್ತಿರುವ ಅವರ ಕುಟುಂಬವರ್ಗದ ಎಲ್ಲರಿಗೂ ಚಿಕ್ಕವಳಾಗಿರುವ ನಾನು ನನ್ನ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ತಾಯಿ ಶ್ರೀದುರ್ಗಾಂಬಿಕಾದೇವಿ ಅವರಿಗೆ ಮತ್ತಷ್ಟು ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.




## ಪ್ರತಿಭಾ ಪುರಸ್ಕಾರವನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿನಿಯರು

### ನರ್ಸಿಂಗ್ ತರಬೇತಿಯನ್ನು ಪಡೆದರೆ ಎಲ್ಲಿ ಬೇಕಾದರೂ ಜೀವಿಸಬಹುದು

**ಜಿ.ಎಸ್. ತೇಜಸ್ವಿನಿ,** ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಪ್ರತಿಭೆ

(ಮೊದಲಿನಿಂದಲೂ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಮಾಡಬೇಕು ಎಂಬ ತುಡಿತ ಇವರಲ್ಲಿತ್ತು. ಈಗ ತಾನೇ ನಾಲ್ಕನೆಯ ವರ್ಷದ ಬಿ.ಎಸ್ ಸಿ. ನರ್ಸಿಂಗ್ ಕೋರ್ಸ್ ಮುಗಿಸಿದ್ದಾರೆ.)

“ನರ್ಸಿಂಗ್ ಕೋರ್ಸ್ ಮಾಡಿದರೆ ಯಾವ ಎಡೆಯಲ್ಲಿಯಾದರೂ ಉದ್ಯೋಗ ದೊರಕುತ್ತದೆ, ಯಾವ ದೇಶದಲ್ಲಿಯಾದರೂ ಜೀವನಮಾಡಬಹುದು ಎಂಬ ವಾಸ್ತವದ ಹಿನ್ನೆಲೆಯಲ್ಲಿ ನರ್ಸಿಂಗ್ ಕೋರ್ಸನ್ನು ನಾನು ಆಯ್ಕೆ ಮಾಡಿಕೊಂಡೆ. ಸೈಕಾಲಜಿಯಲ್ಲಿ ಎಂ.ಎಸ್‌ಸಿ. ಮಾಡಿ ಭವಿಷ್ಯವನ್ನು ಕಟ್ಟಿಕೊಳ್ಳಲು ನಿರ್ಧರಿಸಿದ್ದೇನೆ. ಇಲ್ಲಿನ ಕ್ಯಾಂಪಸ್ ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ಕಾಲೇಜಿನಲ್ಲಿನ ಸಹಪಾಠಿಗಳು ನನ್ನ ಸಾಧನೆಗೆ ಸತತವಾಗಿ ನೆರವಾಗಿ ನಿಂತ ಕಾರಣ ಇಂತಹ ಸಾಧನೆ ಮಾಡಲು ಸಾಧ್ಯವಾಗಿದೆ.”

### ಅತ್ಯುತ್ತಮ ಶೈಕ್ಷಣಿಕ ವಾತಾವರಣ

**ಪಂಕಜ,** ಬಳ್ಳಾರಿ ಜಿಲ್ಲೆ

(ಇವರು ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕಿನ ಹುಳಿಯಾಳು ಗ್ರಾಮದವರು. ಅಪ್ಪಟ ಗ್ರಾಮೀಣ ಪ್ರತಿಭೆ. ನಾಲ್ಕು ವರ್ಷದ ಬಿ.ಎಸ್‌ಸಿ. ಕೋರ್ಸ್ ಮುಗಿಸಿ ಉನ್ನತ ವ್ಯಾಸಂಗವನ್ನು ಪಡೆಯಲು ನಿರ್ಧರಿಸಿದ್ದಾರೆ).

“ನರ್ಸಿಂಗ್ ಕೋರ್ಸನ್ನು ಮುಗಿಸಿದ ಅನಂತರ ಒಂದೇ ಒಂದು ದಿನವೂ ನಿರುದ್ಯೋಗಿಯಾಗಿ ಇರುವುದಿಲ್ಲ ಎಂಬ ನಂಬಿಕೆ, ವಿಶ್ವಾಸದಿಂದಲೇ ಈ ಕೋರ್ಸನ್ನು ಆಯ್ಕೆಮಾಡಿಕೊಂಡಿದ್ದೆ. ಇಲ್ಲಿ, ನಾನು ದೂರದಿಂದ ಬಂದವಳು, ಹೊರಗಿನವಳು ಎಂಬ ಭಾವನೆಗಳು ನಾಲ್ಕು ವರ್ಷದಲ್ಲಿ ನನಗೆ ಎಂದೂ ಬರಲಿಲ್ಲ. ಇಲ್ಲಿನ ಕ್ಯಾಂಪಸ್ ವಾತಾವರಣ ಬಹಳ ಚೆನ್ನಾಗಿದ್ದು, ಕಲಿಕೆಗೆ ಸದಾ ಪ್ರೇರಣೆಯನ್ನು ನೀಡುತ್ತದೆ. ಆಡಳಿತ ಮಂಡಳಿ ಕಲಿಕೆಗೆ ಬೇಕಾದ ಎಲ್ಲ ಅಗತ್ಯ ಮೂಲಸೌಲಭ್ಯಗಳನ್ನೂ ಒದಗಿಸಿದೆ. ನನ್ನ ಶೈಕ್ಷಣಿಕ ಸಾಧನೆಯಲ್ಲಿ ಆಡಳಿತ ಮಂಡಳಿಯ ಪಾಲಿದೆ, ಕೊಡುಗೆಯಿದೆ. ಗುರು ಇದ್ದರೆ ಗುರಿ. ಈ ಕಾರಣದಿಂದಲೇ ನಾನು ಇಲ್ಲಿಯೇ ಸೈಕಾಲಜಿ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿ, ಅದೇ ಕ್ಷೇತ್ರದಲ್ಲಿ ನನ್ನ ಭವಿಷ್ಯವನ್ನು ಕಟ್ಟಿಕೊಳ್ಳಲು ನಿರ್ಧರಿಸಿದ್ದೇನೆ.”

### ಎಲ್ಲಿಯವರಾದರೂ ಕೋರ್ಸ್ ಪೂರ್ಣಗೊಳಿಸಲು ಕಷ್ಟವಾಗುವುದಿಲ್ಲ.

**ಕಲ್ಪನಾ ಕರ್ಕಿ,** ನೇಪಾಳ

“ನಾಲ್ಕನೆಯ ವರ್ಷದ ಬಿ.ಎಸ್‌ಸಿ. ನರ್ಸಿಂಗ್ ಪದವಿಯನ್ನು ಮುಗಿಸಿ ಸ್ವದೇಶಕ್ಕೆ ಹಿಂತಿರುಗಿ ತದನಂತರ ಅಮೆರಿಕದಲ್ಲಿ ಸೇವೆಸಲ್ಲಿಸುವ ಮೂಲಕ ಉತ್ತಮ ಬದುಕನ್ನು ಕಟ್ಟಿಕೊಳ್ಳುವ ಸಂಕಲ್ಪವನ್ನು ನಾನು ಮಾಡಿದ್ದೇನೆ. ಎಲ್ಲಿಯ ತುಮಕೂರು? ಎಲ್ಲಿಯ ನೇಪಾಳ? ಆದರೂ ನಾನು ತುಮಕೂರಿನ ಶ್ರೀದೇವಿ ಕಾಲೇಜನ್ನು ಆಯ್ಕೆ ಮಾಡಿಕೊಂಡಿದ್ದೆ. ಅದು ಒಂದು ರೋಚಕ ಕಥೆ. ನೇಪಾಳದ ಮೊರಾನ್ ಜಿಲ್ಲೆಯಿಂದ ತುಮಕೂರಿನವರೆಗೆ ವಿದ್ಯಾಭ್ಯಾಸಕ್ಕಾಗಿ ಬಂದಿದ್ದೆ. ನೇಪಾಳದ ಕೋಚಿಂಗ್ ಸೆಂಟರ್‌ನಲ್ಲಿ ತುಮಕೂರಿನ ಶ್ರೀದೇವಿ ಕಾಲೇಜು ಉತ್ತಮವಾಗಿದೆ. ಅಲ್ಲಿ ಕಲಿಕೆಗೆ ಬೇಕಾದ ಎಲ್ಲ ಮೂಲ ಸೌಲಭ್ಯಗಳು ಮತ್ತು ಉತ್ತಮ ವಾತವರಣವೂ ಇವೆ ಎಂಬ ಮಾಹಿತಿ ತಿಳಿಯಿತು. ಆಮೇಲೆ ಇಲ್ಲಿಗೆ ಬಂದು ನಾಲ್ಕು ವರ್ಷದ ಕೋರ್ಸನ್ನು ಮುಗಿಸಿದ್ದೇನೆ. ಸಾಕಷ್ಟು ಕನ್ನಡ ಕಲಿತಿದ್ದೇನೆ. ಇಲ್ಲಿನ ಇಡ್ಲಿ, ದೋಸೆ, ವಡೆ ಸಾಂಬಾರ್ ನನಗೆ ಇಷ್ಟವಾಗಿದೆ. ಯಾವುದೇ ದೇಶವಾಗಿರಲಿ, ಅಲ್ಲಿನ ಭಾಷೆ ಗೊತ್ತಿರಲಿ, ಗೊತ್ತಿಲ್ಲದೆ ಇರಲಿ. ವಿದ್ಯಾರ್ಥಿಗಳು ಇಲ್ಲಿಗೆ ಬಂದರೆ ಅವರು ಯಾವುದೇ ಅಡ್ಡಿ ಅತಂಕವಿಲ್ಲದೆ ತಮ್ಮ ಕೋರ್ಸನ್ನು ಮುಗಿಸಿ ಭವಿಷ್ಯವನ್ನು ಕಟ್ಟಿಕೊಳ್ಳಬಹುದು. ಆರಂಭದಲಿದ್ದ ತಲ್ಲಣವು ಕೆಲವೇ ದಿನಗಳಲ್ಲಿ ಮರೆಯಾಯಿತು. ಆರಂಭದಲ್ಲಿ ಊಟ, ತಿಂಡಿ ಅಷ್ಟೇನೂ ಸರಿಬರುವುದಿಲ್ಲವೇನೋ ಎನ್ನುವಷ್ಟರಲ್ಲಿಯೇ ನಾನು ಅಪ್ಪಟ ಕನ್ನಡಿಗಳಾದೆ.

### ಮನೆಯಲ್ಲಿದ್ದು ವ್ಯಾಸಂಗ ಮಾಡಿದ ಅನುಭವ

**ಸೀತಾ ಖಡ್ಕಾ,** ನೇಪಾಳ

“ನಾನು ನಾಲ್ಕನೆಯ ವರ್ಷದ ಬಿ. ಎಸ್‌ಸಿ. ನರ್ಸಿಂಗ್ ಕೋರ್ಸ್ ಮುಗಿಸಿ ತವರಿನತ್ತ ಹೊರಟಿದ್ದೇನೆ. ದೂರದ ನೇಪಾಳದಿಂದ ಬಂದು ಕನ್ನಡವನ್ನು ಅರ್ಥ ಮಾಡಿಕೊಂಡು ವ್ಯವಹಾರಕ್ಕೆ ಬೇಕಾದಷ್ಟು ಕನ್ನಡವನ್ನು ಕಲಿತುಕೊಂಡಿದ್ದೇನೆ. ಕರ್ನಾಟಕದ ಶಿಕ್ಷಣ ಸಂಸ್ಥೆಗಳು ನೇಪಾಳದಲ್ಲಿ ಎಷ್ಟರಮಟ್ಟಿಗೆ ಪ್ರಸಿದ್ಧಿಯಾಗಿವೆ ಮತ್ತು ನೇಪಾಳದ ಜನರ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂಬುದಕ್ಕೆ ನಾನೇ ಸಾಕ್ಷಿ. ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಸೇರಿ ಕೋರ್ಸ್‌ನ್ನು ಪೂರ್ಣಗೊಳಿಸಿದ್ದೇನೆ. ಮಿತ್ರರೊಬ್ಬರ ಸಹಾಯದಿಂದ ತುಮಕೂರಿಗೆ ಬಂದು ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ನರ್ಸಿಂಗ್ ಕೋರ್ಸಿಗೇ ಸೇರಿದ್ದು ನನ್ನ ಬದುಕಿನ ದೊಡ್ಡ ಪವಾಡ. ಇಲ್ಲಿಗೆ ಬರಲು ನನ್ನ ತಂದೆ ತಾಯಿಯರ ಪ್ರೇರಣೆ, ಅವರ ಒತ್ತಾಸೆಯು ನರ್ಸಿಂಗ್ ಕೋರ್ಸಿಗೆ ಸೇರಲು ಪ್ರಮುಖ ಕಾರಣವಾಗಿತ್ತು. ಆರಂಭದಲ್ಲಿ ಒಂದು ರೀತಿಯ ಗೊಂದಲ, ತಳಮಳ ಇತ್ತು. ಆದರೆ ಇಲ್ಲಿನ ವಾತಾವರಣ ಅವೆಲ್ಲವನ್ನೂ ದೂರ ಮಾಡಿತು. ಇಲ್ಲಿನ ಆಡಳಿತ ಮಂಡಳಿಯು ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಿದೆ. ವಿದ್ಯಾರ್ಥಿಗಳಿಗೆ ಮುಂದಿನ ಭವಿಷಕ್ಕೆ ಬೇಕಾದ ನರ್ಸಿಂಗ್ ಕೋರ್ಸ್‌ಗಳನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ಆರಂಭಿಸಿದೆ.

### ಕನ್ನಡ ಭಾಷೆ ಮತ್ತು ಇಲ್ಲಿನ ಊಟ ತಿಂಡಿ ನನಗೆ ಇಷ್ಟ

**ಸಲಿನಾ ತಮಾಂಗ್,** ನೇಪಾಳ

“ನಾನು ನಾಲ್ಕು ವರ್ಷದ ಬಿ.ಎಸ್‌ಸಿ. ನರ್ಸಿಂಗ್ ಕೋರ್ಸ್ ಮುಗಿಸಿ ಅಮೆರಿಕಾದಲ್ಲಿ ಬದುಕು ಕಟ್ಟಿಕೊಳ್ಳುವ ತವಕದಲ್ಲಿದ್ದೇನೆ. ಜೊತೆಗೆ ಸರ್ಜಿಕಲ್ ವಿಭಾಗದಲ್ಲಿ ಉನ್ನತ ಶಿಕ್ಷಣವನ್ನು ಪಡೆಯುವ ಗುರಿಯನ್ನು ಹೊಂದಿದ್ದೇನೆ. ದೂರದ ನೇಪಾಳದಿಂದ ತುಮಕೂರಿನ ಶ್ರೀದೇವಿ ನರ್ಸಿಂಗ್ ಕಾಲೇಜಿಗೆ ಬಂದಿದ್ದೆ ಒಂದು ರೋಚಕ ಅನುಭವ. ಕರ್ನಾಟಕದ ಶೈಕ್ಷಣಿಕ ಸಂಸ್ಥೆಗಳು ನೇಪಾಳದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆ ಎಂಬುದಕ್ಕೂ ನಾವು ತುಮಕೂರಿಗೆ ಬಂದಿರುವುದೇ ಸಾಕ್ಷಿಯಾಗಿದೆ. ಮಿತ್ರರ ಮೂಲಕ ತುಮಕೂರಿನ ಕಾಲೇಜಿಗೆ ನನಗೆ ಪ್ರವೇಶ ದೊರೆಯಿತು. ಇಲ್ಲಿ ನರ್ಸಿಂಗ್ ವಿಭಾಗದಲ್ಲಿ ಬಹಳಷ್ಟು ಕೋರ್ಸ್‌ಗಳಿವೆ. ಇದು ಬೆಂಗಳೂರಿಗೆ ಹತ್ತಿರವಿದೆ. ರಾಜ್ಯ ಮತ್ತು ದೇಶದ ಪ್ರಮುಖ ಶಿಕ್ಷಣಕೇಂದ್ರವಾಗಿ ತುಮಕೂರು ತನ್ನದೇ ಮಹತ್ತ್ವವನ್ನು ಗಳಿಸಿಕೊಂಡಿದೆ. ಇಲ್ಲಿಗೆ ಬಂದಾಗ ಆರಂಭದಲ್ಲಿ ಆತಂಕ, ಕಳವಳ ಇದ್ದವು. ಒಂದೆರಡು ತಿಂಗಳು ಕಳೆದ ನಂತರ ಎಲ್ಲವೂ ಸಹಜವಾದವು. ಸಹಪಾಠಿಗಳು, ಕಾಲೇಜು ಅಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿ ಎಲ್ಲರೂ ನಮಗೆ ಅನನ್ಯವಾದ ಸಹಾಯವನ್ನು ನೋಡಿದರು. ಆಡಳಿತ ಮಂಡಳಿಯು ಎಲ್ಲಾ ಅಗತ್ಯ ಮೂಲಸೌಲಭ್ಯಗಳನ್ನೂ ಒದಗಿಸಿದೆ.


## ಶ್ರೀದೇವಿ ನೈಟಿಂಗೇಲ್ ಪುರಸ್ಕಾರ - 2024



**ಕುಮಾರಿ ಬಿ. ವಿ. ಅನಿತಾ**

(ಇವರು ತುಮಕೂರು ಜಿಲ್ಲೆಯ ಕೊರಟಗೆರೆ ನಿವಾಸಿ. ಇವರ ಅಭಿಪ್ರಾಯಗಳು)

ನಾನು ರಮಣ ಮಹರ್ಷಿ ನರ್ಸಿಂಗ್ ಕಾಲೇಜಿನಲ್ಲಿ ಕೋರ್ಸ್ ಮುಗಿಸಿ ಅದೇ ಕಾಲೇಜಿನಲ್ಲಿ ನವಜಾತ ಶಿಶುವಿಭಾಗದ ಮೇಲ್ವಿಚಾರಕಿಯಾಗಿ ಕಳೆದ ಒಂಬತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನವಜಾತ ಶಿಶುವಿಭಾಗದಲ್ಲಿ (ಎನ್.ಐ.ಸಿ.ಯು) ಕೆಲಸ ಮಾಡುವುದು ನನಗೆ ಬಹಳ ಇಷ್ಟ. ಪೀಡಿಯಾಟ್ರಿಕ್‌ನಲ್ಲಿಯೇ ಎಂ.ಎಸ್‌ಸಿ. ಮಾಡಿ ಮಕ್ಕಳ ವಿಭಾಗದಲ್ಲಿಯೇ ಕೆಲಸ ಮಾಡಬೇಕು ಎಂಬ ಕನಸು ಇದೆ. ಇನ್ನು ಕಾಲೇಜಿನ ಬಗೆಗೆ ಅಧ್ಯಾಪಕರ ಬಗೆಗೆ ಹೇಳುವುದೇ ಬೇಡ. ನನ್ನ ಯಶಸ್ಸಿನಲ್ಲಿ ಇವರೆಲ್ಲರ ಪಾತ್ರ ಬಹಳ ದೊಡ್ಡದು. ನನ್ನ ಸಹಪಾಠಿಗಳು ಎಲ್ಲಾ ಹಂತದಲ್ಲೂ ನನ್ನ ಸಹಕಾರವನ್ನು ನೀಡಿದ್ದಾರೆ. ಆಡಳಿತ ಮಂಡಳಿ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದೆ. ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ನಾಡಿನಲ್ಲಿ ಮಾತ್ರವಲ್ಲದೆ ನಾಡಿನಾಚೆ ಕೂಡ ಹೆಸರು ಮಾಡಿರುವುದು ಹಾಗೂ ಶೈಕ್ಷಣಿಕ ವಲಯದ ನಂಬಿಕೆ ಮತ್ತು ವಿಶ್ವಾಸಕ್ಕೆ ಪಾತ್ರವಾಗಿರುವುದು ತುಂಬಾ ಸಂತೋಷವನ್ನು ಕೊಟ್ಟಿದೆ. ನನ್ನ ಇಂದಿನ ಪ್ರಶಸ್ತಿಯನ್ನು ನನ್ನ ಅಧ್ಯಾಪಕವರ್ಗಕ್ಕೆ ಅರ್ಪಿಸುತ್ತಿದ್ದೇನೆ.




# ಶ್ರೀದೇವಿ ಇಂಜನಿಯರಿಂಗ್ ಕಾಲೇಜಿನಲ್ಲಿ ರೋಬೋಟಿಕ್ಸ್ ಬಗ್ಗೆ ಉಪನ್ಯಾಸ

ತುಮಕೂರಿನ ಪ್ರತಿಷ್ಠಿತ ಶ್ರೀದೇವಿ ಇಂಜನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಹಾಗೂ ಇನ್ಫರ್ಮೇಷನ್ ಸೈನ್ಸ್ ಸಹಯೋಗದಲ್ಲಿ ರೋಬೋಟಿಕ್ಸ್ ಬಗ್ಗೆ ಅಮೇರಿಕದಲ್ಲಿ ನೆಲೆಸಿರುವ ಸಾಫ್ಟ್‌ವೇರ್ ಇಂಜನಿಯರ್ ಎನ್. ಗುರುಮೂರ್ತಿ ಅವರು ದ್ವಿತೀಯ ಹಾಗೂ ತೃತೀಯ ವರ್ಷದ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. "1942ರಲ್ಲಿ ವಿಜ್ಞಾನ ಬರಹಗಾರರಾದ ಐಸಾಕ್ ಅಸಿಮೌ (Isaac Asimov) ಎನ್ನುವವರು ರೋಬೋಟ್‌ನ ಸೂತ್ರಗಳನ್ನು ಮೊದಲ ಬಾರಿಗೆ ನಿರೂಪಿಸಿದರು. 1948ರಲ್ಲಿ ನಾರ್ಬರ್ಟ್ ವೀನರ್ (Norbert Wiener) ಎನ್ನುವಾತ ಸೈಬರ್‌ನೆಟಿಕ್ಸ್‌ನ (cybernetic) ಪ್ರಾಥಮಿಕ ಸೂತ್ರಗಳನ್ನು ತಿಳಿಸಿದರು. ಅನಂತರ ಅಮೆಜಾನ್ ಸಂಸ್ಥೆ ರೋಬೋಟ್ ಮಾಡಬಹುದಾದ ಎಲ್ಲ ಕಾರ್ಯಗಳನ್ನು ಪರಿಚಯಿಸಿತು ಮತ್ತು ಅದರ ಸಾಧಕ–ಬಾಧಕಗಳನ್ನೂ ವಿವರಿಸಿತು. ಪ್ರಸ್ತುತ ಆರೋಗ್ಯ, ಶಿಕ್ಷಣ, ಸೈನ್ಯ, ವಿಮಾನಯಾನ, ಸಾರಿಗೆ, ಕೈಗಾರಿಕೆ ಮೊದಲಾದ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ರೋಬೊಟನ್ನು ಬಳಸುತ್ತಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಚಾಲಕರಹಿತ ಕಾರು ಮತ್ತು ಇತರ ವಾಹನಗಳ ಬಳಕೆಗೆ ರೋಬೋಟ್‌ನ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ಇಂಜಿನಿರಿಂಗ್ ವಿದ್ಯಾರ್ಥಿಗಳು ರೊಬೋಟ್‌ನ ತಂತ್ರಜ್ಞಾನವನ್ನು ಅಭ್ಯಾಸ ಮಾಡಬೇಕು. ಅದರಿಂದ ಅವರ ಭವಿಷ್ಯ ಉಜ್ಜಲವಾಗುತ್ತದೆ" ಎಂದು ಎನ್. ಗುರುಮೂರ್ತಿ ಅವರ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾಗಿರುವ ಡಾ. ನರೇಂದ್ರ ವಿಶ್ವನಾಥ ಅವರು ಎನ್. ಗುರುಮೂರ್ತಿ ಅವರನ್ನು ಸನ್ಮಾನಿಸಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿರುವ ಡಾ. ಬಸವೇಶ, ಇನ್ಫರ್ಮೇಷನ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿರುವ ಡಾ. ರೇಖಾ, ಪ್ರೊ. ಉದಯಕುಮಾರ್, ಪ್ರೊ. ರಾಜೇಶ್ವರಿ, ಪ್ರೊ. ಅಭಿಲಾಶ, ಐಐಐಸಿ ನಿರ್ದೇಶಕರಾದ ಡಾ. ಎಚ್. ಕೆ. ಭಾರ್ಗವ ಉಪಸ್ಥಿತರಿದ್ದರು. ಪ್ರೊ. ಎಂ.ಎಸ್. ಚೇತನ್ ಅವರು ಸ್ವಾಗತಿಸಿದರು. ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಎನ್. ಗುರುಮೂರ್ತಿ ಅವರು ವಿದೇಶದಲ್ಲಿ ಗಳಿಸಿದ ಅನುಭವವನ್ನು ಶ್ಲಾಘಿಸಿದರು.

■ ವರದಿ: ಡಾ. ಎಚ್.ಕೆ. ಭಾರ್ಗವ

## ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ 2024ನೇ ಸ್ವಾಗತ ಸಮಾರಂಭ

# ಆತ್ಮವಿಶ್ವಾಸದಿಂದಲೇ ಗೆಲುವಿನ ಮೆಟ್ಟಿಲು ಏರಬಹುದು



"ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದಲೇ ಗೆಲುವಿನ ಮೆಟ್ಟಿಲು ಏರಬಹುದು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿಯಿಟ್ಟುಕೊಂಡಿದ್ದರೆ ಏನು ಬೇಕಾದರೂ ಸಾಧಿಸಬಹುದು. "ಮನೆಯೇ ಪಾಠಶಾಲೆ, ತಾಯಿಯೇ ಮೊದಲ ಗುರು" ಎನ್ನುವುದಕ್ಕೆ ಅನುಗುಣವಾಗಿ ಮನೆಯ ವಾತಾವರಣವಿದ್ದರೆ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುತ್ತದೆ. ಶ್ರದ್ಧೆಯಿಂದ ವ್ಯಾಸಂಗ ಮಾಡಿದರೆ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಬೇಕು" ಎಂದು ಕುಣಿಗಲ್ ಜಿ.ಎಫ್.ಎಫ್.ಸಿ. ಕಾಲೇಜಿನ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಸಿ.ಆರ್. ಮನೋಜ್ ಅಭಿಪ್ರಾಯಪಟ್ಟರು.

ಶ್ರೀದೇವಿ ಪದವಿ ಕಾಲೇಜು ಮತ್ತು ಶ್ರೀದೇವಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಶ್ರೀಆಗಮನ 2024 ಎಂಬ ಸ್ವಾಗತ ಸಮಾರಂಭವನ್ನು ನವೆಂಬರ್ 14 ರಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು "ಪ್ರಸ್ತುತ ವಿದ್ಯಾರ್ಥಿ ತನ್ನ ವಿದ್ಯಾಭ್ಯಾಸದ ಸಂದರ್ಭದಲ್ಲಿಯೇ ತನ್ನ ಮುಂದಿನ ಭವಿಷ್ಯದ ಬಗ್ಗೆ ಕನಸನ್ನು ಕಂಡಾಗ ಅಂತಹ ವಿದ್ಯಾರ್ಥಿ ಯಶಸ್ಸನ್ನು ಗಳಿಸುತ್ತಾನೆ. ವಿದ್ಯಾರ್ಥಿಗಳು ಗುರಿಯೊಡನೆ ಸಾಧನೆ ಮಾಡಬೇಕು. ಐಎಎಸ್ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದೀರ್ಘಕಾಲದ ಗುರಿಯಿರಬೇಕು. ಅಂತಹ ಗುರಿಯೊಡನೆ ವಿದ್ಯಾರ್ಥಿಗಳು ತಮ್ಮ ಕನಸು ಕಟ್ಟಿಕೊಳ್ಳಬೇಕು" ಎಂದರು.

ಮುಖ್ಯ ಅತಿಥಿಗಳಾಗಿದ್ದ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದವರಿಗೆ ಶಿಕ್ಷಣ ಸಂಸ್ಥೆಯೂ ಎಲ್ಲ ಅನುಕೂಲಗಳನ್ನು ಕಲ್ಪಿಸುತ್ತಿದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರಿಂದ ಯಶಸ್ಸಿನ ಹಾದಿಯನ್ನು ತಲುಪುವಂತೆ ಮಾಡಬಹುದು. ವಿದ್ಯಾರ್ಥಿಗಳು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗುವುದರೊಂದಿಗೆ ಉತ್ತಮ ಕೌಶಲ್ಯಗಳನ್ನು ಬೆಳಸಿಕೊಳ್ಳಬೇಕು. ಪದವಿ ಪಡೆದ ವಿದ್ಯಾರ್ಥಿಗಳು ಸಾಕಷ್ಟು ಕಂಪನಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳು ಅಭ್ಯಾಸದ ಅವಧಿಯ ಪ್ರತಿಯೊಂದು ಕ್ಷಣವನ್ನು ಸದುಪಯೋಗ ಪಡಿಸಿಕೊಳ್ಳಬೇಕು" ಎಂದರು. ಇದೇ ಸಂದರ್ಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಕುಣಿಗಲ್ ಜಿ.ಎಫ್.ಎಫ್.ಸಿ. ಕಾಲೇಜಿನ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಸಿ.ಆರ್. ಮನೋಜ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀದೇವಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಅಶ್ವಿನ್‌ಕುಮಾರ್, ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ. ನರೇಂದ್ರವಿಶ್ವನಾಥ್, ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಡಾ. ತೌಫಿಕ್ ಉಲ್ಲಾ, ಉಪನ್ಯಾಸಕರಾದ ಪ್ರೊ. ಅಷಿಯಾ ಭಾನು, ಪ್ರೊ. ವತ್ಸಲ, ಪ್ರೊ. ಸಾರೀಯ ಖಾನಂ, ಡಾ. ಶ್ವೇತಾ ಜೆ.ಆರ್, ಪ್ರೊ. ವಾಸುದೇವ. ಮತ್ತು ಸಿ.ಎ. ಪ್ರೊ. ರಾಘವೇಂದ್ರ ಜಟ್ಟಣ ಅವರುಗಳು ಭಾಗವಹಿಸಿದ್ದರು.

■ ವರದಿ: ಎನ್.ಆನಂದ

# ಮಕ್ಕಳ ಅಂಧತ್ವ ನಿವಾರಣೆಗೆ ಕೊಡುಗೆ

"ಮರಗಳು ಬಿಡುವ ಹಣ್ಣು ಮನುಷ್ಯನಿಗೆ ಮತ್ತು ಪ್ರಾಣಿಗಳಿಗೆ ಆಹಾರವಾಗುತ್ತದೆ. ಹಸುವಿನ ಹಾಲನ್ನು ಕರು ಮಾತ್ರ ಕುಡಿಯುವುದಿಲ್ಲ ಜನರು ಸೇವಿಸುತ್ತಾರೆ. ಮೋಡಗಳು ಸುರಿಸುವ ಮಳೆಯ ನೀರು ಪ್ರಕೃತಿಗೆ ಚೈತನ್ಯದಾಯಕವಾಗಿರುತ್ತದೆ. ಅದೇ ರೀತಿ ಮನುಷ್ಯ ತಾನೊಬ್ಬನೇ ಬದುಕದೆ ತನ್ನೊಡನಿರುವ ಎಲ್ಲಾ ಜೀವಿಗಳಿಗೂ ಬದುಕಲು ಅವಕಾಶವನ್ನು ಕಲ್ಪಿಸಬೇಕು. ಅದರಂತೆ ನಯೋನಿಕ್ ಐ ಕೇರ್ ಚಾರಿಟಬಲ್ ಟ್ರಸ್ಟ್‌ನ ರೂವಾರಿಗಳಾದ ಐಟಿ ಇಂಜಿನಿಯರ್ ಪ್ರಶಾಂತ್ ಮತ್ತು ಅವರ ಮಡದಿ ನೇತ್ರತಜ್ಞೆಯಾದ ಡಾ.ಸುರೇಖಾ ಅವರು ಮಕ್ಕಳ ಅಂಧತ್ವ ನಿವಾರಣೆಗೆ ಅದ್ಭುತ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ರಪಂಚದಲ್ಲಿ ಯಾವ ಮಗುವೂ ವೈದ್ಯಕೀಯ ನೆರವಿಲ್ಲದೆ ಅಂಧತ್ವದಿಂದ ಬಳಲಬಾರದು ಎನ್ನುವ ಉದ್ದೇಶದಿಂದ ಕಾರ್ಯಶೀಲರಾಗಿರುವ ಪ್ರಶಾಂತ್ ಮತ್ತು ಡಾ. ಸುರೇಖಾ ದಂಪತಿಗಳನ್ನು ಹಾರ್ದಿಕವಾಗಿ ಅಭಿನಂದಿಸಿ ಅವರ ಕಾರ್ಯ ನಿರಂತರವಾಗಿ ಮುಂದುವರಿಯಲೆಂದು ಹಾರೈಸುತ್ತೇನೆ" ಎಂದು ಬೆಂಗಳೂರಿನ ಸುವರ್ಣಮುಖಿ ಸಂಸ್ಕೃತಿಧಾಮ ಆಶ್ರಮದ ಅಧ್ಯಕ್ಷರಾದ ಡಾ.ಆಚಾರ್ಯ ಎಂ. ನಾಗರಾಜು ಅವರು ತಮ್ಮ ಭಾಷಣದಲ್ಲಿ ಅಭಿಪ್ರಾಯಪಟ್ಟರು.




ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್ ಅವರು "ಪ್ರಶಾಂತ್ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ ಸೇವಾಜಾಲವನ್ನು ನಿರ್ಮಿಸಿಕೊಂಡಿದ್ದಾರೆ. ಬಡ ಮಕ್ಕಳಿಗೆ ಅಂಧತ್ವ ಶಾಪವಾಗಬಾರದು ಎನ್ನುವುದು ಅವರ ಉದ್ದೇಶ ಸುತ್ಯರ್ಹವಾಗಿದ್ದು ಅವರು ನೀಡಿದ ಕೊಡುಗೆಯನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತಿದ್ದೇವೆ. ಮಕ್ಕಳ ಕಣ್ಣಿನ ಆಪರೇಷನ್‌ಗೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳು ನಮ್ಮಲಿದೆ. ಮಕ್ಕಳಿಗೆ ಕ್ಯಾಟ್‌ರ್‍ಯಾಕ್ಟ್ ಬರುತ್ತಿದ್ದು, ಅದನ್ನು ಆಪರೇಷನ್ ಮೂಲಕ ಪರಿಹರಿಸದಿದ್ದರೆ ಮಕ್ಕಳು ಅಂಧರಾಗುವ ಸಾಧ್ಯತೆಯಿದೆ. ಇಂತಹ ಮಕ್ಕಳ ರಕ್ಷಣೆ ಮಾಡುತ್ತಿರುವ ನಯೋನಿಕ್ ಐ ಕೇರ್ ಟ್ರಸ್ಟ್‌ನ ಕೆಲಸ ಅಭಿನಂದನಾರ್ಹವಾಗಿದೆ" ಎಂದರು.

ನಯೋನಿಕ್ ಐ ಕೇರ್ ಚಾರಿಟಬಲ್ ಟ್ರಸ್ಟ್‌ನ ಪ್ರಶಾಂತ್ ಅವರು ಮಾತನಾಡುತ್ತಾ "ಆಚಾರ್ಯ ಡಾ. ನಾಗರಾಜ್ ಮತ್ತು ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ನಮ್ಮ ಸಮಾಜದ ಎರಡು ಕಣ್ಣುಗಳಿದಂತೆ. ಅವರ ಸೇವೆ ಬಹಳ ದೊಡ್ಡದು. ಅವರ ಹೆಸರಿನಲ್ಲಿ ಒಂದು ಸಾವಿರ ಮಕ್ಕಳ ಆಪರೇಷನ್‌ಗೆ ಬೇಕಾದ ಮೂಲಸೌಕರ್ಯಗಳನ್ನು ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಇಂದು ನೀಡುತ್ತಿದ್ದೇವೆ. ಅದರಲ್ಲಿ 30 ಯುನಿಟ್ ಆಕ್ಸಿಜನ್ ಕಂಟೈನರ್, ಕ್ಯಾಟರ್‍ಯಾಕ್ಟ್ ಆಪರೇಷನ್‌ಗೆ ಬೇಕಾದ ಔಷಧ ಹಾಗೂ ಸರ್ಜಿಕಲ್ ಬ್ಲೇಡ್ಸ್, ಆಪರೇಷನ್ ನಂತರ ಬಳಸುವ ಉನ್ನತ ಗುಣಮಟ್ಟದ ಐ ಲೆನ್ಸ್, ಕನ್ನಡಕಗಳು ಮತ್ತು ಆಪರೇಷನ್‌ಗೆ ಬರಲು ರೋಗಿಗಳಿಗೆ ವ್ಯವಸ್ಥೆ ಮೊದಲಾದವುಗಳು ಇದರಲ್ಲಿ ಸೇರ್ಪಡೆಯಾಗಿದೆ. ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರಚಿಕಿತ್ಸಾ ವಿಭಾಗದ ಡಾ. ಲಾವಣ್ಯ ರಮಣ ಅವರ ನೇತೃತ್ವದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ" ಎಂದರು.

ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು ಮಾತನಾಡುತ್ತಾ "ಭಾರತದಲ್ಲಿ ನಲವತ್ತೈದು ಲಕ್ಷಕ್ಕೂ ಹೆಚ್ಚು ಮಕ್ಕಳು ಕಣ್ಣಿನ ದೋಷದಿಂದ ಬಳಲುತ್ತಿದ್ದಾರೆ. ಅಂತಹವರ ರಕ್ಷಣೆಗೆ ಮುಂದಾಗಿರುವ ನಯೋನಿಕ್ ಐ ಕೇರ್‌ನ ಸೇವೆ ಪ್ರಶಾಂಶಾರ್ಹವಾದುದು. ಈ ಸಂದರ್ಭದಲ್ಲಿ ನಾನು ಪ್ರಶಾಂತ್ ಅವರನ್ನು ಅಭಿನಂದಿಸುತ್ತೇನೆ" ಎಂದರು. ಶ್ರೀದೇವಿ ಮೆಡಿಕಲ್ ಕಾಲೇಜಿನ ಸೂಪರ್‌ಡೆಂಟ್ ಕೆ. ಮೋಹನ್‌ಕುಮಾರ್ ಅವರು ಉಪಸ್ಥಿತರಿದ್ದರು.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**